


# ಸಿಹಿ ಕಹಿ

ಸಂಪಾದಕರು : ಮಾರುತಿ ಹೊಸಮನಿ
Editor : MARUTI BASAVANTAPPA HOSAMANI
Cell : +91 97413 19119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 214 | Friday 12-01-2024 | E-mail : maruti.b.hosamani76@gmail.com | Page: 4 | Price : Rs. 1/-


## ವೃತ್ತಿಯಲ್ಲಿ ದೇವಿಯ ಆರಾಧಕರು, ಪ್ರವೃತ್ತಿಯಲ್ಲಿ ಸಮಾಜ ಸೇವಕರು

ತುಪ್ಪದಹಳ್ಳಿ : ಇತ್ತೀಚಿನ ದಿನಗಳಲ್ಲಿ ಕೆಲವು ಪೂಜಾರಿಗಳು ಮಾನವೀಯ ಮೌಲ್ಯಗಳನ್ನು ಬೆಳೆಸಿ ಕೊಂಡು, ಕೆಲವು ಸಮಾಜ ಸೇವೆಗಳನ್ನು ಮಾಡುತ್ತಿದ್ದಾರೆ.

ಪೂಜಾರಿಗಳು ವೃತ್ತಿಯಲ್ಲಿ ದೇವರ ಆರಾಧಕರಾಗಿದ್ದು, ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿರುತ್ತಾರೆ. ಸಮಾಜವನ್ನು ಎಚ್ಚೆತ್ತು ಕೊಳ್ಳುವಲ್ಲಿ ಅವರ ಸೇವೆಯು ಪಾತ್ರ ಬಹಳ ಹಿರಿದಾದದ್ದು. ಅದರಲ್ಲಿ ಕೆಲವರು ಸಮಾಜ ಸೇವೆ ಮಾಡುವವರನ್ನೂ, ಗುರುತಿಸಿ, ಅವರ ಸೇವೆಯನ್ನು ಮೆಚ್ಚಿ, ಅವರಿಗೆ ಸಲ್ಲುವ ಗೌರವ ಸನ್ಮಾನ ಮಾಡುವವರ ಸಂಖ್ಯೆ ಅತಿ ವಿರಳ ಎಂದರೆ ತಪ್ಪಾಗಲಾರದು.ಇಂತಹ ಸನ್ಮಾನ ಮಾಡುವ ಕೆಲವು ಪೂಜಾರಿಗಳಿಗೆ ನಮ್ಮ "ಸಿಹಿ-ಕಹಿ" ಕನ್ನಡ ದಿನ ಪತ್ರಿಕೆ ಮತ್ತು ಎಸ್.ಕೆ ನ್ಯೂಸ್ ಚಾನೆಲ್ ನಿಂದ ಒಂದು 'ಸಲಾಂ' ಹೇಳಿ ಬಿಡೋಣ.

ದಾವಣಗೆರೆ ಜಿಲ್ಲೆ ಜಗಳೂರು ತಾಲುಕಾ ಮರಿಕುಂಟೆ ಗ್ರಾಮದ ಹತ್ತಿರ 'ತುಪ್ಪದಹಳ್ಳಿ' ಎಂಬ ಪುಟ್ಟ ಊರು ಇದೆ. ಈ ಊರಿನಲ್ಲಿ ಪೂಜಾರ್ ಸಿದ್ದಪ್ಪ ಎಂಬ ಹೆಸರಿನಿಂದ ಕರೆಯಲ್ಪಡುವ ಅವಳಿ ದುರುಗಮ್ಮನ ಪೂಜಾರಿ ಇದ್ದಾರೆ. ಇವರು ಅತಿ ಸರಳ ಮತ್ತು ಸಜ್ಜನಿಕೆಯ ವ್ಯಕ್ತಿಯಾಗಿದ್ದಾರೆ. ವೃತ್ತಿಯಲ್ಲಿ ಪೂಜಾರಿ ಎಂದು ಗುರುತಿಸಿ



ಕೊಂಡಿದ್ದರೂ, ಆ ವೃತ್ತಿಗೆ ಯಾವುದೇ ಚ್ಯುತಿ ಬರದಂತೆ ನೋಡಿ ಕೊಂಡಿದ್ದಾರೆ.

ಇವರು ಆ ಊರಿನಲ್ಲಿರುವ ಅವಳಿ ದುರುಗಮ್ಮ ದೇವಿಯ ದೇವಸ್ಥಾನವನ್ನು ಕಟ್ಟಿಸಲು ಸೇವಾ ಕಮಿಟಿಯ ಭಕ್ತರು, ದೇವಿಯ ಟ್ರಸ್ಟ್ ನ ಪದಾಧಿಕಾರಿಗಳು ಮತ್ತು ಸದಸ್ಯರು, ಕೇರಿಯ ಮುಖಂಡರು, ರಾಜಕೀಯ ಮುಖಂಡರು ಮತ್ತು ಯುವಕರ ಸಹಕಾರ ಹಾಗೂ ಸಹಾಯದಿಂದ ಹಣವನ್ನು ದೇವಸ್ಥಾನದ ಕಟ್ಟಡಕ್ಕೆ ಹಾಕಿ, ಬೃಹತ್ ಪ್ರಮಾಣದ ಕಟ್ಟಡ ಕಟ್ಟಲು ಮುಂದಾಗಿದ್ದಾರೆ ಎಂದರೆ ಇವರ ನಿಸ್ವಾರ್ಥ ಸೇವೆವನ್ನು ಎಲ್ಲರೂ ಮೆಚ್ಚಿ ಕೊಳ್ಳಬೇಕಾಗುತ್ತದೆ.

ಇವರು ದೇವಿಯ ಆರಾಧನೆಯನ್ನು ವೃತ್ತಿಯಾಗಿ ಮಾಡಿ ಕೊಂಡಿದ್ದರೂ, ಪ್ರವೃತ್ತಿಯಲ್ಲಿ ಸಮಾಜ ಸೇವೆ ಮಾಡುವವರನ್ನು ಗುರುತಿಸಿ, ರಾಜ್ಯ ಪ್ರಶಸ್ತಿ ಕೊಡಿಸುವಲ್ಲಿ , ಇವರ ಪಾತ್ರ ಹಿರಿದಾದದ್ದು.ಇವರಿಗೆ ರಾಜ್ಯ ಪ್ರಶಸ್ತಿ , ಜಿಲ್ಲಾ ಪ್ರಶಸ್ತಿ ತಾಲೂಕು ಪ್ರಶಸ್ತಿ ಅನೇಕ ಬಾರಿ ದೊರೆತಿದ್ದರೂ, ಅದರ ಬಗ್ಗೆ ಕಿಂಚಿತ್ತು ತಲೆ ಕೆಡಿಸಿಕೊಳ್ಳದೆ ಸಮಾಜದಲ್ಲಿ ಸಣ್ಣ ಸೇವೆ ಮಾಡುವವರನ್ನು ಗುರುತಿಸಿ, ಸನ್ಮಾನ ಮಾಡುವುದು ಅವರಿಗೆ ಗೌರವ ಸೂಚಿಸುವುದು, ಇವರ ಪ್ರವೃತ್ತಿಯಾಗಿದೆ ಎಂದರೆ ತಪ್ಪಾಗಲಾರದು. ಇವರು ಸಮಾಜದಲ್ಲಿ ಮಧ್ಯಪಾನಕ್ಕೆ ದಾಸರಾಗಿರುವ ಜನರನ್ನು ತಿಳುವಳಿಕೆ ಮತ್ತು ಪ್ರಜ್ಞೆ ಹೇಳುವ ಮೂಲಕ ಹಾಗೂ ತಮ್ಮ ಗಿಡ ಮೂಲಿಕೆಗಳಿಂದ, ಮದ್ಯಪಾನ ಮಾಡುವವರನ್ನು ಮಧ್ಯದಿಂದ ಸಾವಿರಾರು ಜನರನ್ನು ದೂರವಿರಿಸಿದ್ದಾರೆ.

ಇವರು ಮಾಡುವ ಕೆಲವು ಸಮಾಜ ಸೇವೆಯನ್ನು ಕೇಳಿ,ನಾವು ಮತ್ತು ನಮ್ಮ ಮಾಧ್ಯಮದವರು ನೋಡೋಣ, ಎಂದು ಆಕಸ್ಮಿಕವಾಗಿ ತುಪ್ಪದಹಳ್ಳಿ ಗ್ರಾಮಕ್ಕೆ ಭೇಟಿ ಕೊಟ್ಟಾಗ, ಸಾರ್ವಜನಿಕರಂತೆ ನಾವು ನಿಂತು ನೋಡುತ್ತಿದ್ದಾಗ, "ಜೀವ ಸ್ಪಂದನ ಸೇವಾ ಟ್ರಸ್ಟ್" ಎಂಬ ಬೆಂಗಳೂರು ಕಮಿಟಿಯಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿರುವ ಅಸಗೋಡು ಗ್ರಾಮದ ವಿಜಯಲಕ್ಷ್ಮಿ ತಮ್ಮ ಟ್ರಸ್ಟ್ ನ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಸೇರಿ, ಬೆಂಗಳೂರಿನ ಸ್ಲಂ ಏರಿಯಾದಲ್ಲಿ ನಿರ್ಗತಿಕರಿಗೆ ಬೆಡ್ ಶೀಟ್ ಗಳನ್ನು ನೀಡಿದ್ದಾರಂತೆ, ಮುಂದೆ ಇವರು ಸ್ಲಂ ಏರಿಯಾದಲ್ಲಿರುವ ನಿರ್ಗತಿಕ ಕುಟುಂಬಗಳನ್ನು ಗುರುತಿಸಿ, ಅವರಿಗೆ ಆಹಾರ ಕಿಟ್ ವಿತರಣೆ ಮಾಡಬೇಕೆಂಬ ಮಹದಾಶೆಯ ಮನೋಭಾವವನ್ನು ಹೊಂದಿದ್ದಾರೆ.ಇವರು ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಂತೆ,ತಮ್ಮ ಕೆಲಸದಿಂದ ನಿವೃತ್ತಿಯಾದ ಮೇಲು ತಮಗೆ ಬರುವ ಸಂಬಳದಲ್ಲಿ 10 ಸಾವಿರ ಪ್ರತಿ ತಿಂಗಳು ಸಮಾಜ ಸೇವೆಗಾಗಿ ಮುಡಿಪಾಗಿಟ್ಟಿರುವರಂತೆ, ಇದನ್ನು ಮನಗಂಡ ಸಿದ್ದಪ್ಪ ಪೂಜಾರಿ ಅವರು ತಮಗೆ ದೊರೆತಿರುವ ಎಲ್ಲಾ ಪ್ರಶಸ್ತಿಗಳನ್ನು ಮರೆತು,ತಾವು ಮಾಡುವ ಸಮಾಜ ಸೇವೆ ಮರೆತು, ಎಲ್ಲಿಯೂ ತಮ್ಮ ಸೇವೆ ಬಗ್ಗೆ ಹೇಳಿ ಕೊಳ್ಳದೆ ತಮ್ಮ ಸ್ವಂತ ಹಣದಲ್ಲಿ, ಶಾಲು ಮತ್ತು ಹೂವಿನ ಹಾರವನ್ನು ತಂದು, ಅಲ್ಲಿಯೇ ನಿಂತಿದ್ದ ದೇವಿಯ ಭಕ್ತರನ್ನು ಕರೆದು, ಅವರ ಕೂಡ, ಸನ್ಮಾನ ಮಾಡಿಸಿ ಖುಷಿ ಪಟ್ಟಿದನ್ನು , ನಾವು ಕಣ್ಣಾರೆ ವೀಕ್ಷಕರಾಗಿ ನೋಡುತ್ತ ನಿಂತಿದ್ದೇವು. ನಾವುಗಳು ಇವರಿಗೆ ತಿಳಿಯದ ಹಾಗೆ ಈ ವರದಿಯನ್ನು ಸಮಾಜದ ಮುಂದೆ ಇಡುತ್ತಿದ್ದೇವೆ ಇದಕ್ಕೆ ಅವರ ಕ್ಷೇಮೆ ಇರಲಿ. ಈ ಸೇವೆ ಹೀಗೆ ಮುಂದುವರೆಯಲಿ ಎಂದು ಇವರು ಆರಾಧಿಸುವ "ಅವಳಿ ದುರುಗಮ್ಮ" ಕರುಣಿಸಲಿ ಎಂಬುದೆ ನಮ್ಮ ಆಶಯವಾಗಿದೆ.


**ತಾಲೂಕ ವರದಿಗಾರರು :**
**ಪ್ರದೀಪ್.ಕುಮಾರ್.ಸಿ.**

## ಗುಡಿಸಲಿಗೆ ಬೆಂಕಿ ತಗುಲಿ-ಅಪಾರ ಹಾನಿ

ಲಿಂಗದಳ್ಳಿ : ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಲಿಂಗದಳ್ಳಿ ಗ್ರಾಮದ ಸಿದ್ದಪ್ಪ ವಾಲಿಕಾರ ಎಂಬುವರ ತೋಟದ ವಸ್ತಿ ಯಲ್ಲಿರುವ ಗುಡಿಸಲಿಗೆ ಇಂದು ದಿನಾಂಕ 11-01-2024 ರಂದು ಬೆಳಗ್ಗೆ 11 ಘಂಟೆ ಸುಮಾರಿಗೆ ಗುಡಿಸಲಿನಲ್ಲಿರುವ ದೇವರ ಜಗುಲಿಯ ಮೇಲಿನ ಉರಿಯುವ ದೀಪವು ಆಕಸ್ಮಿಕವಾಗಿ ಜಗುಲಿಯಿಂದ ಕೆಳಗೆ ಬಿದ್ದ ಕಾರಣ,ಅಲ್ಲೇ ಸಮೀಪವಿರುವ ಹಾಸಿಗೆಗೆ ಬೆಂಕಿ ತಗುಲಿ ಕೆಲವೇ ಕ್ಷಣದಲ್ಲಿ ಗುಡಿಸಲಿಗೆ ಹತ್ತಿ ಧಗ-ಧಗನೆ ದಹಿಸಿ,ಗುಡಿಸಲಿನಲ್ಲಿರುವ ರೈತನ ಐದು ಲಕ್ಷ ರೂಪಾಯಿ ಹಣ,ಎರಡು ತೊಲೆ ಬಂಗಾರು,ಒಂದು ಚೀಲ ಮೆಣಸಿನಕಾಯಿ,ಬಂಗಾರದ ಗುಳದಾರಿ ಬೆಲೆಬಾಳುವ ವಸ್ತ್ರಾಭರಣಗಳು,ಇತರೆ ಕಾಗದ ಪತ್ರಗಳ ದಾಖಲೆಗಳು,ಇತರೆ ಜೀವನಕ್ಕೆ ಸಂಬಂಧಿಸಿದ ವಸ್ತುಗಳನ್ನು ಸುಟ್ಟು ಕರಕಲಾಗಿವೆ. ಇದರಿಂದ ಕುಟುಂಬಸ್ಥರು ತುಂಬಾ ನೊಂದು ಕೊಂಡಿದ್ದಾರೆ.ಈ ಆಕಸ್ಮಿಕವಾಗಿ ನಡೆದ ಘಟನೆಗೆ ನೊಂದು ಕೊಂಡ ಬಡ ರೈತ ಕುಟುಂಬಕ್ಕೆ ಸರ್ಕಾರವಾಗಲಿ,ಅಥವಾ,ಧಾನಿಗಳಾಗಲಿ ಸಹಾಯ ಹಸ್ತ ನೀಡಿದರೆ ನೊಂದ ಕುಟುಂಬಕ್ಕೆ ಕಣ್ಣೀರು ಒರೆಸಿ ದಂತಾಗುತ್ತದೆ ಎಂಬುದೆ ಅಲ್ಲಿಯ ಗ್ರಾಮಸ್ಥರ ಅಭಿಪ್ರಾಯವಾಗಿದೆ.

**ಜಿಲ್ಲಾ ವರದಿಗಾರರು:**
**ಶಿವಪ್ಪ.ಬಿ.ಹರಿಜನ.ಇಂಡಿ**

## ವಿಶ್ವ ಶ್ರೇಷ್ಠ ವಿವೇಕಾನಂದರು



ವಿಶ್ವನಾಥದತ್ತ ಭುವನೇಶ್ವರಿ ದೇವಿಯ ಉದರದಿ
ಜನ್ಮ ತಾಳಿದರು ನರೇಂದ್ರನಾಗಿ ಪಶ್ಚಿಮ ಬಂಗಾಳದಿ
ಬೆಳೆದರು ರಾಮಕೃಷ್ಣ ಪರಮಹಂಸರ ಆಶೀರ್ವಾದದಿ
ಬೆಳಗಿದರು ಕೀರ್ತಿ ಅಧ್ಯಾತ್ಮ ಲೋಕದಿ

ಬರೆದ ಕೃತಿಗಳು ರಾಜಯೋಗ ಕರ್ಮಯೋಗ
ಜೊತೆಗೆ ಭಕ್ತಿಯೋಗ ಜ್ಞಾನಯೋಗ
ವಿವೇಕಾನಂದರಾಗಿ ಬೆಳಗಿದರು ಈ ಜಗ
ಚಿಕಾಗೋದಲ್ಲಿ ಪರಿಚಯಿಸಿದರು ಹಿಂದೂ ಧರ್ಮದ ಯೋಗ

1893ರ ವಿಶ್ವಧರ್ಮ ಸಮ್ಮೇಳನದಲ್ಲಿ
ಸಹೋದರ ಸಹೋದರಿಯರೇ ಎಂದರು ಅಮೇರಿಕದಲ್ಲಿ
ರಾಮಕೃಷ್ಣ ಮಿಷನ್ ಸ್ಥಾಪಿಸಿದರು ಕಲ್ಕತ್ತಾದಲ್ಲಿ
ಪ್ರಪಂಚಕ್ಕೆ ಹೆಸರುವಾಸಿಯಾದರು ಚಿಕ್ಕ ವಯಸ್ಸಿನಲ್ಲಿ

ತಾನು ತನ್ನದು ಎನ್ನುವುದು ಬಿಟ್ಟು
ಜಗದ ಬದಲಾವಣೆಗೆ ಕಾವಿಯ ತೊಟ್ಟು
ಯುವಕರ ಬದುಕಿಗೆ ಸ್ಫೂರ್ತಿದಾಯಕ ಮಾತುಕೊಟ್ಟು
ಆದರ್ಶವಾದರೂ 39 ವರ್ಷಕ್ಕೆ ಲೋಕ ಬಿಟ್ಟು

ದೇಶ ಸುತ್ತಿದರು ಮಾನವ ಜನ್ಮದ ಉದ್ಧಾರಕ್ಕೆ
ಸಮಾನತೆಯ ಹರಿಕಾರರಾಗಿ ಹೆಸರಾದರು ವಿಶ್ವಕ್ಕೆ
ಚಿಂತನೆಗಳಿಂದ ಆದರ್ಶವಾದರೂ ಮಾನವ ಕುಲಕ್ಕೆ
ಮನುಜ ಕುಲವೇ ಬಾಗಿ ನಮಿಸುತಿದೆ ನಿಮ್ಮ ಪಾದಕ್ಕೆ

ಜನವರಿ 12 ಈ ಮಹಾತ್ಮರ ಜನ್ಮ ದಿನ
ಭಾರತದ ಪಾಲಿಗೆ ರಾಷ್ಟ್ರೀಯ ಯುವದಿನ ಚಿಂತನೆ,
ಸಂದೇಶಗಳಿಂದ ಮಾನವ ಜನ್ಮ ಪಾವನ
ಎಂದೂ ಮರೆಯದ ಭಾರತದ ದಿವ್ಯ ಚೇತನ

ಇಂದಿಗೂ ಯುವಕರ ಪಾಲಿನ ಯುವರತ್ನ
ದಿವ್ಯ ಸಂದೇಶಗಳಿಂದ ಬದುಕು ಬದಲಾಯಿಸಿದ ಸೇವಾರತ್ನ
ಸರಳತೆಯ ಬದುಕು ಬಾಳಿ ಬೆಳಕಾದ ಕಾಯಕರತ್ನ
ಸೂರ್ಯ ಚಂದ್ರರಿರೋವರೆಗೂ ಭಾರತಕ್ಕೆ ನೀವೇ ಭಾರತ ರತ್ನ

**-ಶ್ರೀ ಮುತ್ತು.ಯ.ವಡ್ಡರ (ಶಿಕ್ಷಕರು) ಬಾಗಲಕೋಟ**
**Mob-9845568484**

## ಕಂಠಿವೀರಭದ್ರೇಶ್ವರ ಕಾರ್ತಿಕೊತ್ಸವ ಸಂಭ್ರಮ ಸಡಗರದಿಂದ ಸಂಪನ್ನ

ಬಾದಾಮಿ : ನಗರದ ವಿಸ್ತರಣಾ ಪ್ರದೇಶವಾದ ಆಶ್ರಯ ಕಾಲೋನಿಯ ಸಮೀಪ ಕಲ್ಯಾಣ ಶೆಟ್ಟಿಯವರ ಜಮೀನಿನಲ್ಲಿರುವ ಜನರ ಆಡು ಭಾಷೆಯಲ್ಲಿ ಕಂಠಿ ವೀರಭದ್ರೇಶ್ವರನೆಂದೆ ಸುಪ್ರಸಿದ್ಧವಾಗಿರುವ ದೇವಸ್ಥಾನದಲ್ಲಿ ಕಾರ್ತಿಕೊತ್ಸವವನ್ನು ವಿಜ್ರಂಭಣೆಯಿಂದ ಆಚರಿಸಿದರು.

ಸುಮಾರು 6-7 ತಲೆಮಾರಿನಿಂದ ಬಾಗಲಕೋಟಯ ಮುಚಖಂಡಿ ವೀರಭದ್ರೇಶ್ವರ ಮತ್ತು ನಗರದ ಕಂಠೀ ವೀರಭದ್ರೇಶ್ವರನ ಪ್ರಥಮ ಭಕ್ತರಾದ ಮುಚಖಂಡಿಮಠ ಮನೆತನದ ಪ್ರಥಮ ಸಂಕಲ್ಪದ ಅಭಿಷೇಕ ಮತ್ತು ನೈವೇದ್ಯದೊಂದಿಗೆ ಸಡಗರದಿಂದ ಪ್ರಾರಂಭವಾಗಿತ್ತು. ಕಾರ್ತಿಕೋತ್ಸವದ ನಿಮಿತ್ಯ ದೇವಸ್ಥಾನದಲ್ಲಿ ಸಾವಿರಾರು ಭಕ್ತರು ಶ್ರೀ ವೀರಭದ್ರದೇವರ ದರ್ಶನದೊಂದಿಗೆ ತೀರ್ಥಪ್ರಸಾದ ಮತ್ತು ಅನ್ನದಾಸೋಹವನ್ನು ಸ್ವೀಕರಿಸಿ ಪುನೀತರಾದರು.

ಇನ್ನೂ ಸಾಯಂಕಾಲ ಕರಡಿಮಜಲು ಮತ್ತು ಸಕಲ ವಾದ್ಯಗಳೊಂದಿಗೆ ಶ್ರೀ ವೀರುಪಾಕ್ಷ ದೇವಸ್ಥಾನದಿಂದ ಹೊರಟ ಪಲ್ಲಕ್ಕಿ ಮೆರವಣಿಗೆಯು ದೇವಸ್ಥಾನದ ಪ್ರಥಮ ಭಕ್ತ ಮನೆತನವಾದ ಮುಚಖಂಡಿಮಠ ಅವರ ಮನೆಯಿಂದ ಆರತಿಯನ್ನು ತೆಗೆದುಕೊಂಡು ಬದಾಮಿ ನಗರದ ಮುಖ್ಯ ಬೀದಿಗಳಲ್ಲಿ ವೀರಗಾಸೆಯ ಕುಣಿತದೊಂದಿಗೆ ಹೊರಟು ದೇವಸ್ಥಾನ ತಲುಪಿತು ಅಲ್ಲಿ ವಿವಿಧ ಭಕ್ತರು ವೀರಭದ್ರ ದೇವರ ಮಹಿಮೆಯ ವಡಪುಗಳನ್ನು ಹೇಳಿ ನಂತರ ಅಂದಾನಯ್ಯ ಮುಚಖಂಡಿಮಠ ಇವರು ಕಾರ್ತಿಕ ದೀಪಗಳನ್ನು ಪೂಜೆಮಾಡಿ ಪಡಿ ಹೊಯ್ದು ದೀಪಗಳ ಸ್ಥಾನಪಲ್ಲಟದ ಮೂಲಕ ಕಾರ್ತಿಕೊತ್ಸವದ ಸೇವೆ ಸಲ್ಲಿಸಿ ಕಾರ್ಯಕ್ರಮವನ್ನು ಸಂಪನ್ನಗೋಳಿಸಿದರು. ಈ ಶುಭ ಸಂದರ್ಭದಲ್ಲಿ ದೇವಸ್ಥಾನ ಮಾಲಿಕ ಅನೀಲ ಕಲ್ಯಾಣಶೆಟ್ಟಿ, ಅರ್ಚಕರಾದ ಸಾಂತಮಪ್ಪ ಜೇವೋಜಿ, ರಮೇಶ ಜೇವೋಜಿ, ಕಮತಗಿ ಕುಟುಂಬಗಳೊಂದಿಗೆ, ದೇವಸ್ಥಾನದ ಟ್ರಸ್ಟಿಗಳಾದ ಸಂಗಪ್ಪ ಪಟ್ಟಣದ, ಸಂಗಪ್ಪ ಪಟ್ಟಣಶೆಟ್ಟಿ, ಬಸವಂತಪ್ಪ ಶಿವಶಿಂಪಿ, ರಮೇಶ ಮಣ್ಣೂರ, ರವಿ ಶಿವಶಿಂಪಿ, ಪುರವಂತ ಚೆನ್ನಪ್ಪ ಸೊಬರದ, ಕುಬಸದ, ರಾಮದುರ್ಗ, ಶಿವಕುಮಾರ ಮುತ್ತಲಗೇರಿ ಸೇರಿದಂತೆ ಅಪಾರ ಭಕ್ತಸ್ತೋಮ ನೇರೆದು ಕಾರ್ತಿಕೊತ್ಸವಕ್ಕೆ ಮೆರಗು ತಂದರು.

## ಶ್ರೀ ಗವಿಮಠ ಜಾತ್ರೆ ನಗರದಲ್ಲಿ ಸ್ವಚ್ಛತೆ ಕಾರ್ಯ ಕೈಗೊಳ್ಳಲು ಮನವಿ



ಕೊಪ್ಪಳ : ಇಲ್ಲಿನ ಐತಿಹಾಸಿಕ ಪ್ರಸಿದ್ಧ ಧಾರ್ಮಿಕ ಸುಕ್ಷೇತ್ರ ಶ್ರೀ ಗವಿಮಠದ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳವರ ಅಜ್ಜನ ಜಾತ್ರೆಗೆ ಲಕ್ಷಾಂತರ ಭಕ್ತಾದಿ ಜನ ಸಮೂಹ ಕೊಪ್ಪಳ ನಗರಕ್ಕೆ ಆಗಮಿಸಲಿದ್ದು ಇದೇ ತಿಂಗಳ 27 ರಂದು ಜರುಗಲಿರುವ ಮಹಾ ರತೋತ್ಸವದ ಪ್ರಯುಕ್ತ ಕೊಪ್ಪಳ ನಗರದಲ್ಲಿ ಸ್ವಚ್ಛತಾ ಕಾರ್ಯ ಹಾಗೂ ರಸ್ತೆಗಳ ಉಪ ರಸ್ತೆ ಗಳ ದುರಸ್ತಿ ಕಾರ್ಯ ಶೀಘ್ರ ಕೈಗೊಂಡು ಜನತೆಗೆ ಅನುಕೂಲತೆಯನ್ನು ದೊರಕಿಸಿ ಕೊಡಬೇಕೆಂದು ಜಿಲ್ಲಾ ಆಡಳಿತಕ್ಕೆ ಮತ್ತು ನಗರಸಭೆಗೆ ಕೊಪ್ಪಳ ಜಿಲ್ಲಾ ಬಿಎಸ್ಪಿ ಪಕ್ಷದ ಉಸ್ತುವಾರಿ ಮಹಬೂಬ್ ಖಾನ್ ರವರು ಮನವಿ ಮಾಡಿಕೊಂಡು ಒತ್ತಾಯಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿದ ಅವರು ಕೊಪ್ಪಳ ಶ್ರೀ ಗವಿಮಠದ ಅಜ್ಜನ ಜಾತ್ರೆಗೆ ಸುಮಾರು ಆರರಿಂದ ಏಳು ಲಕ್ಷ ಜನ ಭಕ್ತಾದಿಗಳು ಮಹಾರಥೋತ್ಸವದಲ್ಲಿ ಭಾಗಿಯಾಗಲಿದ್ದು ಭಕ್ತ ಸಮೂಹ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ನಗರದಲ್ಲಿ ಸ್ವಚ್ಛತೆ ಕಾರ್ಯ ಮತ್ತು ರಸ್ತೆಗಳ ದುರಸ್ತಿ ಕಾರ್ಯ ಶೀಘ್ರ ಕೈಗೊಂಡು ಅನುಕೂಲತೆಯನ್ನು ಒದಗಿಸಿ ಕೊಡಬೇಕೆಂದು ಮಹಬೂಬ್ ಖಾನ್ ರವರು ಮನವಿ ಮಾಡಿಕೊಂಡಿದ್ದಾರೆ.

## ಬೃಹತ್ ನೇಕಾರರ ಸಮುದಾಯಗಳ ಸಮಾವೇಶ





ಬಾಗಲಕೋಟೆ : ನೇಕಾರ ಸಮುದಾಯಗಳು ಸಂಘಟನೆ ಹಾಗೂ ಅಭಿವೃದ್ಧಿ ಉದ್ದೇಶದಿಂದ ಫೆಬ್ರುವರಿಯಲ್ಲಿ ಬೃಹತ್ ನೇಕಾರರ ಸಮುದಾಯಗಳ ಸಮಾವೇಶವನ್ನು ಆಯೋಜಿಸಲಾಗುವುದು ಎಂದು ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟ ಅಧ್ಯಕ್ಷ ಬಿ.ಎಸ್.ಸೋಮಶೇಖರ ಹೇಳಿದರು.

ನವನಗರದ ಪತ್ರಿಕಾಭವನ ದಲ್ಲಿ ಗುರುವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಅಂದಿನ ಸಮಾವೇಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಉದ್ಘಾಟನೆಗೆ ಆಹ್ವಾನಿಸಲಾಗಿದ್ದು, ಬೃಹತ್ ಸಂಖ್ಯೆಯಲ್ಲಿ ನೇಕಾರರು ಬಾಗಲಕೋಟೆ, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಗದಗ-ಬೆಟಗೇರಿ, ಹಾವೇರಿ, ವಿಜಯಪುರ, ಕೊಪ್ಪಳ ಜಿಲ್ಲೆಗಳಿಂದ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ನೇಕಾರ ಸಮುದಾಯಗಳ ಒಕ್ಕೂಟ ದಿಂದ ಸರ್ಕಾರಕ್ಕೆ ವಿವಿಧ ಬೇಡಿಕೆಗಳ ಬಗ್ಗೆ ಮನವಿ ಸಲ್ಲಿಸಲಾಗು ವುದು ಎಂದರು.

ಹಿಂದುಳಿದ ವರ್ಗಕ್ಕೆ ಸೇರಿದ ನೇಕಾರ ಸಮುದಾಯವು 60 ಲಕ್ಷ ಜನ ಸಂಖ್ಯೆ ಹೊಂ ದಿದ್ದು, ಶೈಕ್ಷಣಿಕ, ರಾಜಕೀಯ ಹಾಗೂ ಆರ್ಥಿಕ ಬಲವರ್ಧ ನೆಗಾಗಿ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನೇಕಾರ ಸಮುದಾಯಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿತ್ತು. ನೇಕಾರ ಸಮುದಾಯಗಳ ಅಭಿವೃದ್ಧಿ ನಿಗಮ ಕಾರ್ಯ ರಂಭಕ್ಕೆ ನೇಕಾರ ಒಕ್ಕೂಟ ದಿಂದ ಸಿಎಂ ಸಿದ್ದರಾಮಯ್ಯ ನವರಿಗೆ ಮನವಿ ಮಾಡಿಕೊಳ್ಳ ಲಾಗುವುದು ಎಂದು ತಿಳಿಸಿದರು.ಕಾಂತರಾಜ್ ಆಯೋಗ ವರದಿ ಸಮೀಕ್ಷೆ ಪೂರ್ಣ ಗೊಂಡಿದ್ದು ಸಿದ್ದರಾಮಯ್ಯ ನವರೇ ಮುಖ್ಯ ಮಂತ್ರಿಗಳಾಗಿದ್ದಾರೆ ಹಿಂದು ಳಿದ ಸಮುದಾಯಗಳಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲ ತಂದು ಕೊಡಬಲ್ಲ ಜಾತಿಗಣತಿ ವರದಿಯನ್ನು ಶೀಘ್ರ ಬಿಡುಗಡೆ ಮಾಡ ಬೇಕೆಂದು ಒತ್ತಾಯಿಸಲಾ ಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮುರುಗೇಶ ಕಡ್ಲಿಮಟ್ಟಿ, ಭಾಗ್ಯ ಹಂಡಿ, ಮನೋಹರ ರಕ್ಕಸಗಿ, ವೀರಣ್ಣ ಶಿರಗಣ್ಣವರ್ ಮತ್ತಿತರರು ಇದ್ದರು.

## ಪಂಚಮಸಾಲಿ ಸಮಾಜದ ಸ್ವಾಭಿಮಾನ ಕಿಚ್ಚನ್ನು ಕೆಣಕಿದ ಮಾಜಿ ಶಾಸಕ ನಡಹಳ್ಳಿ: ಮಹಾಂತಗೌಡ ಪಾಟೀಲ



ಇಳಕಲ್ : ಪಂಚಮಸಾಲಿ ಸಮಾಜದ ಪ್ರಥಮ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಮಹಾಸ್ವಾಮಿಗಳ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿದ ಮಾಜಿ ಶಾಸಕ ಎ.ಎಸ್.ನಡಹಳ್ಳಿ ಅವರು ಪಂಚಮಸಾಲಿ ಸಮಾಜದ ಸ್ವಾಭಿಮಾನ ಕಿಚ್ಚನ್ನು ಕೆಣಕಿದ್ದಾರೆ ಎಂದು ಪಂಚಮಸಾಲಿ ಸಮಾಜದ ಇಳಕಲ್ ತಾಲೂಕ ಘಟಕದ ಅಧ್ಯಕ್ಷ ಮಹಾಂತಗೌಡ ಪಾಟೀಲ (ಜಿ.ಎಂ.ಇ) ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಬುಧವಾರ ತಮ್ಮ ಕಚೇರಿಯಲ್ಲಿ ಪಂಚಮಸಾಲಿ ಸಮಾಜ, ಯುವ ಘಟಕ ,ಪಂಚಸೈನ್ಯ, ವತಿಯಿಂದ ಕರೆಯಲಾದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತ ನಡಹಳ್ಳಿಯವರು ಪೂಜ್ಯ ಜಗದ್ಗುರು ಶ್ರೀ ಬಸವ ಜಯ ಮೃತುಂಜಯ ಶ್ರೀಗಳನ್ನು ಬಹಿರಂಗವಾಗಿ ಕ್ಷಮೆ ಕೇಳಬೇಕು ಇಲ್ಲದಿದ್ದರೆ ನಡಹಳ್ಳಿ ಅವರ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದ್ದಾರೆ.

ಮಾಜಿ ಶಾಸಕ ನಡಹಳ್ಳಿ ಅವರು ಮಲಗಿದ ಪಂಚಮಸಾಲಿ ಹುಲಿಗಳನ್ನು ಬಡಿದು ಎಬ್ಬಿಸಿದ್ದಿರಿ ನಾವುಗಳು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಜನೆವರಿ 5ರಂದು ಇಳಕಲ್ ಮತ್ತು ಹುನುಗುಂದ ಅವಳಿ ತಾಲೂಕಿನಲ್ಲಿ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಸಿದರು ಇದಕ್ಕೂ ಮಣಿಯದಿದ್ದರೆ ಮುಂದೆ ರಾಜ್ಯಾಧ್ಯಂತ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಪಂಚಮಸಾಲಿ ಇಳಕಲ್ ತಾಲೂಕ ಮಹಿಳಾ ಘಟಕದ ಅಧ್ಯಕ್ಷೆ ಶಿಲ್ಪಾ ನರಗುಂದ ಮಾತನಾಡಿ ಪಂಚಮಸಾಲಿ ಜಗದ್ಗುರುಗಳನ್ನು ಕ್ಷಮೆ ಕೇಳದಿದ್ದರೆ ಪಂಚಮಸಾಲಿ ಸಮಾಜದ ಮಹಿಳೆಯರೇ ಬಂದು ಮೊದಲು ಮುತ್ತಿಗೆ ಹಾಕುತ್ತೇವೆ ಎಂದು ಹೇಳಿದರು.

ಹುಚ್ಚಪ್ಪ ಐವಳ್ಳಿ, ಬಸು ಪಾಟೀಲ, ಮಹಾಂತೇಶ ಬೊಮ್ಮಸಾಗರ, ರೇವನೆಪ್ಪ ದೇಗಿನಾಳ, ಮಹಾಂತೇಶ್ ಬಿಳಗಿ, ಮಂಜುನಾಥ್ ಪಲ್ಲೇದ, ನಿಂಗಪ್ಪ ಲೋಟಗೇರಿ, ಮಹೇಶ್ ಭಮಸಾಗರ , ವಿಶ್ವನಾಥ್ ಪಾಟೀಲ , ಚಂದ್ರು ಗೊಂದಿ, ನಾಗರಾಜ ಕೌದಿ, ವಿಜಯಕುಮಾರ ನಾಗುರ, ಚೇತನ ಭಮಸಾಗರ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ "ಗುರುನಮನ"

ಬಾಗಲಕೋಟೆ : ಸಿದ್ದೇಶ್ವರ ಶ್ರೀಗಳು ಹುಟ್ಟಿದ, ನಡೆದಾಡಿದ ಈ ನಾಡಿನಲ್ಲಿ ಹುಟ್ಟಿದ ನಾವೆಲ್ಲರೂ ಧನ್ಯರು, ಭಾಗ್ಯವಂತರು , ಶ್ರೀಗಳು ತೋರಿದ ನಿಸ್ವಾರ್ಥ ಸೇವೆ, ಸರಳ ಬದುಕನ್ನು ನಮ್ಮ ಬದುಕಲ್ಲಿ ಪ್ರಾಮಾಣಿಕವಾಗಿ ಅಳವಡಿಸಿಕೊಂಡರೆ ಸುಂದರ ಸಮಾಜದ ನಿರ್ಮಾಣ ಮಾಡಬಹುದು ಎಂದು ವಚನ ರಕ್ಷಕ ಗೆಳೆಯರ ಬಳಗ ವಿದ್ಯಾಗಿರಿ ಆಯೋಜಿಸಿದ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಶ್ರೀಗಳ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ

ಗುರುನಮನ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬವಿವಿ ಸಂಘದ ಗೌರವಾನ್ವಿತ ಸದಸ್ಯರಾದ ಸಿದ್ರಾಮ ಮನಹಳ್ಳಿ ನುಡಿದರು.ಆಯೋಜಕರನ್ನು ಶ್ಲಾಘನೆ ಮಾಡಿ ಬೀಳುವವರನ್ನು ಎಬ್ಬಿಸುವ ವಚನ ಮಾಡಿದ ವಚನ ರಕ್ಷಕ ಗೆಳೆಯರ ಬಳಗದ ಕಾರ್ಯ ಶ್ಲಾಘನೀಯ ತಾವು ಧನ್ಯರು ವಿಶ್ವ ಕಂಡ ಶ್ರೇಷ್ಠ ಸಂತ ಸಿದ್ದೇಶ್ವರ ಬುದ್ದಿಗಳು ಬರದ ನಾಡನ್ನು ಸಮೃದ್ಧಿ ಮಾಡಿದ್ದು ಸಿದ್ದೇಶ್ವರ ಅಪ್ಪಂಗಳ ಕೊಡುಗೆ ಎಂದರು. ಇನ್ನೋರ್ವ ಅತಿಥಿಗಳಾಗಿ ಆಗಮಿಸಿದ್ದ ಬಾಗಲಕೋಟೆ ಅಖಿಲ ಭಾರತ ವೀರಶೈವ ಮಹಾಸಭೆ ಜಿಲ್ಲಾ ಅಧ್ಯಕ್ಷರಾದ ಜಿ.ಎನ್.ಪಾಟೀಲ ಮಾತನಾಡಿ ವಿಜಯಪುರ ಎರಡು ಗುಮ್ಮಟಗಳಿಗೆ ಪ್ರಸಿದ್ಧಿಯಾಗಿದೆ ವಿಶ್ವವಿಖ್ಯಾತ ಗೋಳಗುಮ್ಮಟ ಹಾಗೂ





ಜ್ಞಾನ ಗುಮ್ಮಟ ತತ್ವಜ್ಞಾನಿ ಶ್ರೀ ಸಿದ್ದೇಶ್ವರ ಅಪ್ಪಂಗಳು ಎಂದರು.ಶ್ರೀಗಳ ಪ್ರವಚನವಿದ್ದಾಗ ಬಾಗಲಕೋಟೆಯ ಎಲ್ಲ ದಾರಿಗಳು ಬಂದು ಪ್ರವಚನ ಸ್ಥಳಕ್ಕೆ ಸೇರುತ್ತಿದ್ದವು. ದಿವ್ಯ ಸಾನಿಧ್ಯವಹಿಸಿದ್ದ ವಿದ್ಯಾಗಿರಿಯ ಕನ್ನೂರು ಹಿರೇಮಠದ ಶ್ರೀ ವಿಶ್ವ ರಾಜೇಂದ್ರ ಮಹಾಸ್ವಾಮಿಗಳು ಆಶೀರ್ವಚನ ನೀಡಿ ನುಡಿ ನಮನ ಸಲ್ಲಿಸಿ ಗುರು ನಮನ ಆಯೋಜಿಸಿದ ವಚನ ರಕ್ಷಕ ಗೆಳೆಯರ ಬಳಗದ ಸದಸ್ಯರನ್ನು ಶ್ಲಾಘನೆ ಮಾಡಿ, ಶ್ರೀಗಳು ಭೂಮಿ ಮೇಲಿನ ದೇವರು ರಾಮನ - ಕೃಷ್ಣನ ನಡೆ ನುಡಿಯನ್ನು ನಾವು ಶ್ರೀಗಳಲ್ಲಿ ಕಂಡಿದ್ದೇವು. ಅವರ ಕಾಯ ಮರೆಯಾದರೂ ಛಾಯ ಮರೆಯಾಗಿಲ್ಲ ಎಂದರು.ಇದೇ ಸಂಧರ್ಭದಲ್ಲಿ ಸಮಾಜದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಸಾಧಕರನ್ನು ಗೌರವಿಸಲಾಯಿತು. ಇದೇ ಸಂಧರ್ಭದಲ್ಲಿ ಆಯೋಜಕರು ಸರಕಾರಿ ಶಾಲೆಯ ಹಾಗೂ ಅನಾಥಾಶ್ರಮದ ವಿದ್ಯಾರ್ಥಿಗಳಿಗೆ ನೋಟ ಬುಕ್, ಪೆನ್ನು ವಿತರಿಸಿದರು ಹಾಗೂ ಬಡ ಮತ್ತು ದಿವ್ಯಾಂಗರಿಗೆ ಸಹಾಯ ಧನ ನೀಡಿದರು. ಖ್ಯಾತ ಸಂಗೀತಗಾರರಾದ ಡಾ.ಸಿದ್ಧರಾಮಯ್ಯ ಮಠಪತಿ, ಡಾ.ಕಾಶಿಲಿಂಗ ಮಠ.ಡಾ.ರೇವಣಸಿದ್ದೇಶ್ವರ ಬೆಣ್ಣೂರು ಹಾಗೂ ಸಂತೋಷ ಗದ್ದನಕೇರಿ ಹಾಗೂ ಸಂಗಡಿಗರಿಂದ ಭಕ್ತಿಪೂರ್ವಕ ಸಂಗೀತ ನಮನ ಸಲ್ಲಿಸಲಾಯಿತು. ಕಾರ್ಯಕ್ರಮದ ನಂತರ ಮಹಾಪ್ರಸಾದ ಏರ್ಪಡಿಸಲಾಗಿತ್ತು.ಮುತ್ತು ಮಡಿವಾಳ ಪ್ರಾಸ್ತಾವಿಕವಾಗಿ ಮಾತನಾಡಿರು.ಶಶಿಧರ ಹೆಂಜಿ ಸ್ವಾಗತಿಸಿದರು. ಮೋಹನ ದೇಶಪಾಂಡೆ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.ವಚನ ರಕ್ಷಕ ಗೆಳೆಯರ ಬಳಗದ ಚಂದ್ರು ವಿರಕ್ತಮಠ.ಶಿವಲಿಂಗ ಕುದುರಿ ಕನ್ನೂರ.ರವಿಕುದುರಿ ಕನ್ನೂರ. ಗೋವಿಂದ ಖ್ಯಾದಿಕೇರಿ.ಶಿವಾನಂದ ಕುಂಬಾರ.ಶಂಕ್ರಯ್ಯ ಗಣಾಚಾರಿ, ಸಂಗಮೇಶ ಹೊಲಗೇರಿ, ಶ್ರೀಶೈಲ ಡೆಂಗಿ, ಹಣಮಂತ ತೆಗ್ಗಿ, ಸಂಗಪ್ಪಾ ಹಡಪದ ಹಾಗೂ ಈಶ್ವರ ಕುದರಿ ಕನ್ನೂರ ಕಾರ್ಯಕ್ರಮದ ನೇತ್ರತ್ವ ವಹಿಸಿದ್ದರು.

## ಎನ್‌ಎಂಎಂಎಸ್ ಪರೀಕ್ಷೆ ಪೂರ್ವ ತಯಾರಿ

### ಸ್ಪರ್ಧಾತ್ಮಕ ಪರೀಕ್ಷೆಗಳಿಂದ ಆತ್ಮ ವಿಶ್ವಾಸ ಹೆಚ್ಚು: ಪಿಎಸ್ಐ



ತೇರದಾಳ : ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವುದರಿಂದ ಸಾಮಾನ್ಯ ಜ್ಞಾನ ಬೆಳೆಯುವುದರ ಜತೆಗೆ ಆತ್ಮ ವಿಶ್ವಾಸವೂ ಹೆಚ್ಚಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಬೇಕೆಂದು ಪಿಎಸ್ಐ ಅಪ್ಪು ಐಗಳಿ ಹೇಳಿದರು.

ಇಲ್ಲಿನ ಖೋತ ಆಂಗ್ಲ ಟುಟೋರಿಯಲ್ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಎನ್‌ಎಂಎಂಎಸ್ ಪರೀಕ್ಷೆ ಪೂರ್ವ ಸಿದ್ಧತೆ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದರು.

ಶಿಕ್ಷಣದ ಜತೆಗೆ ವಿದ್ಯಾರ್ಥಿಗಳು ಸಂಸ್ಕಾರವನ್ನು ಕಲಿಯಬೇಕು. ಅವಾಗಲೇ ಪೂರ್ಣ ಪ್ರಮಾಣದ ವ್ಯಕ್ತಿ ಆಗಲು ಸಾಧ್ಯ. ಆ ದಿಸೆಯಲ್ಲಿ ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ಪ್ರಜೆಗಳಾಗುವಂತೆ ವಿದ್ಯಾರ್ಥಿಗಳಿಗೆ ಸಲಹೆ ಮಾಡಿದರು. ಡಾ. ಎಂ.ಆರ್. ಪಾಟೀಲ, ಸಂಸ್ಥೆ ಅಧ್ಯಕ್ಷ ಮುರಳೀಧರ ಸೋಪಾನ ಖೋತ ಮಾತನಾಡಿದರು. ನಾಮದೇವ ಸೋಪಾನ ಖೋತ, ಕಿರಣ ಹುಲ್ಲೊಳ್ಳಿ, ಪೊಲೀಸ್ ಪೇದೆ ಮಲ್ಲಿಕಾರ್ಜುನ ಕೆಂಚೆನ್ನವರ ಮತ್ತಿತರಿದ್ದರು.

## ಬೆಂಗಳೂರು ವಿವಿ: ಮಹಾಂತೇಶ್ ಎಂ ಅವರಿಗೆ ಪಿಎಚ್.ಡಿ ಪ್ರದಾನ



ಬೆಂಗಳೂರು : ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಮುಖಂಡ ಹಾಗೂ ಯುಜಿಸಿ-ಮಹಿಳಾ ಅಧ್ಯಯನ ಕೇಂದ್ರದ ಸಂಶೋಧನಾ ವಿದ್ಯಾರ್ಥಿ ಮಹಾಂತೇಶ್ ಎಂ ಅವರು ಯುಜಿಸಿ-ಮಹಿಳಾ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಪ್ರೊ. ಸಿ.ಡಿ.ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ "ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬದ ಸ್ತ್ರೀವಾದಿ ಅಧ್ಯಯನ" ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

## ಇದು ಬರಿ ಬರಹವಲ್ಲ ಕೃತಿ ಲೋಕಾರ್ಪಣೆ

### ವರ್ತಮಾನದ ಸಂಗತಿಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವಲ್ಲಿ ಪುಸ್ತಕಗಳ ಪಾತ್ರ ಅಪಾರ: ಬೀಳಗಿ



ಅಮೀನಗಡ : ವರ್ತಮಾನದ ಸಂಗತಿಗಳನ್ನು ಒಂದೆಡೆ ಸಂಗ್ರಹಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸುವಲ್ಲಿ ಪುಸ್ತಕಗಳು ಮಹತ್ವದ ಪಾತ್ರ ವಹಿಸುತ್ತದೆ ಎಂದು ಹಿರಿಯ ಸಾಹಿತಿ ಸಿದ್ದಲಿಂಗಪ್ಪ ಬೀಳಗಿ ಹೇಳಿದರು.

ಪಟ್ಟಣದ ಸಂಗಮೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜನಲ್ಲಿ ನಡೆದ ಯುವ ಲೇಖಕ ಎಚ್.ಎಚ್.ಬೇಪಾರಿ ಅವರ ಇದು ಬರಿ ಬರಹವಲ್ಲ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ವಿದ್ಯುನ್ಮಾನ ಮಾಧ್ಯಮದ ತೀವ್ರತೆಗೆ ಮುದ್ರಣ ಮಾಧ್ಯಮ ಮಂಕಾಗುತ್ತಿದೆ ಎಂಬವಾದ ಸಮರ್ಥನೀಯವಾದುದಲ್ಲ. ಇಂದಿಗೂ ಲಕ್ಷಾಂತರ ಸಂಖ್ಯೆಯಲ್ಲಿ ಪತ್ರಿಕೆಗಳು ಪ್ರಕಟವಾಗುತ್ತಿರುವುದೇ ಇದಕ್ಕೆ ಸಾಕ್ಷಿ ಎಂದರು.

ಪತ್ರಿಕೆಗಳಲ್ಲಿ ಪ್ರಕಟವಾದ ವಿಶೇಷ ವರದಿಗಳನ್ನು ಸಂಕಲಿಸಿ ದಾಖಲಿಸುವ, ಅಲ್ಲದೇ ಮುಂದಿನ ಪೀಳಿಗೆಗೆ ಆಕರವನ್ನಾಗಿಸುವ ಪರಂಪರೆ ಅನೂಚಾನವಾಗಿ ನಡೆದು ಬಂದಿದೆ. ಸಂಪುಟಗಳ ರೂಪದಲ್ಲೂ ಪ್ರಕಟವಾಗಿ ಮಾಹಿತಿಯ ಕಣಜಗಳಾಗುತ್ತಿವೆ. ಅಂತಹ ದಾಖಲೀಕರಣ ಕಾರ್ಯವನ್ನು ಇದು ಬರಿ ಬರಹವಲ್ಲ ಕೃತಿಯಲ್ಲಿ ಲೇಖಕರು ಮಾಡಿದ್ದಾರೆ ಎಂದರು.

ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಹಿರಿಯ ಸಾಹಿತಿ ಎಸ್ಕೆ ಕೊನೆಸಾಗರ, ಇಂದಿನ ಯುವಕರು ಮೊಬೈಲ್ ಬದಿಗಿರಿಸಿ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು, ಪುಸ್ತಕ ಓದುವ ಪರಿಪಾಠ ಬೆಳೆಸಿಕೊಂಡರೆ ಜ್ಞಾನ ವೃದ್ಧಿಯಾಗುತ್ತದೆ, ಇದು ಬರಿ ಬರಹವಲ್ಲ ಕೃತಿ ಸಾಮಾಜಿಕ ಕಳಕಳಿ ಹೊಂದಿರುವ ಬರಹಗಳನ್ನು ಹೊಂದಿದ್ದು ಪ್ರತಿಯೊಬ್ಬರು ಓದಬೇಕು ಎಂದರು.

ಇಳಕಲ್ ಸರ್ವ ವಿಜಯ ಸೇವಾ ಸಂಸ್ಥೆಯ ಗೌರವಾಧ್ಯಕ್ಷ ರಾಜು ಬೋರಾ, ಇಳಕಲ್ ಲಿಮ್ರಾ ವೆಲ್ಫೇರ್ ಅಸೋಶಿಯೇಶನ್ ಅಧ್ಯಕ್ಷ ಅಬ್ದುಲ್ ರಜಾಕ್ ತಟಗಾರ ಕಾರ್ಯಕ್ರಮ ಉದ್ಘಾಟಿಸಿದರು.

> ಇದು ಬರಿ ಬರಹವಲ್ಲ ಕೃತಿಯಲ್ಲಿರುವ ಬರಹಗಳು ಸಮಾಜದ ಒಳ ಸಂಕಟಗಳನ್ನು ತೆರೆದಿಡುತ್ತದೆ ಮತ್ತು ಜನರ ದೈನಂದಿನ ನೋವು ನಲಿವುಗಳಿಗೆ ಈ ಕೃತಿ ಕನ್ನಡಿ ಹಿಡಿಯುತ್ತದೆ ಪ್ರತಿಯೊಬ್ಬರು ಪುಸ್ತಕ ಓದಬೇಕು, ಪುಸ್ತಕ ಪ್ರೀತಿಯು ಓದುವ ಆಸಕ್ತಿ ಮತ್ತು ಸಂಸ್ಕಾರವನ್ನು ಹೆಚ್ಚಿಸುತ್ತದೆ.
>
> **-ಆರ್.ಜಿ.ಸನ್ನಿ, ಜಿಲ್ಲಾಧ್ಯಕ್ಷರು,**
> **ಕರ್ನಾಟಕ ಮಾಧ್ಯಮಿಕ ಶಿಕ್ಷಕ ಸಂಘ,ಬಾಗಲಕೋಟೆ**

ಕರ್ನಾಟಕ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷ ಆರ್.ಜಿ.ಸನ್ನಿ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಉದಯವಾಣಿ ಪತ್ರಿಕೆಯ ಹಿರಿಯ ವರದಿಗಾರ ಶ್ರೀಶೈಲ ಕೆ. ಬಿರಾದಾರ, ಸಾಹಿತಿ ಮಹಾದೇವ ಬಸರಕೋಡ ಪುಸ್ತಕದ ಬಗ್ಗೆ ಮಾತನಾಡಿದರು.

ಪ್ರಭುಶಂಕರೇಶ್ವರ ಗಚ್ಚಿನಮಠದ ಶಂಕರರಾಜೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಚೇರಮನ್ ಆಯ್.ಎಸ್.ಲಿಂಗದಾಳ, ಪ್ರಾಚಾರ್ಯ ಎಂ.ಎನ್.ವಂದಾಲ, ಇಳಕಲ್ ಆಶಾದೀಪ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ರಘು ಹುಬ್ಬಳ್ಳಿ, ಹಿರಿಯ ಲೇಖಕರಾದ ಶಿವಶಂಕ್ರಪ್ಪ ಶಿರೋಳ, ಬಸವರಾಜ ಕನ್ನೂರ, ಶರಣಪ್ಪ ಹೂಲಗೇರಿ, ಎಚ್.ಟಿ.ರಂಗಾಪೂರ, ಅಶೋಕ ಬಳ್ಳಾ ಶಿಕ್ಷಕ ಎಸ್.ಎಚ್.ಹೊಸಮನಿ, ರಹಿಮಾನ್ ಬುವಾಜಿ, ಹುಸೇನಸಾಬ ಮುದಗಲ್, ಡಿ.ಎಲ್.ಕೆಂಗಲ್, ಎಸ್.ಎಚ್.ಬಿರಕಬ್ಬಿ ಸೇರಿದಂತೆ ಇನ್ನಿತರರು ಇದ್ದರು.

## ಹನಗಂಡಿಯಲ್ಲಿ ಗ್ರಾಮ ಸಭೆ: ಸರಕಾರಿ ಶಾಲೆಗಳ ಬಗ್ಗೆ ಕಾಳಜಿ ಇರಲಿ



ತೇರದಾಳ : ಗ್ರಾಮೀಣ ಪ್ರದೇಶಗಳಲ್ಲಿನ ಸರಕಾರಿ ಶಾಲೆಗಳ ಬಗ್ಗೆ ಗ್ರಾಮಸ್ಥರಲ್ಲಿ ಕಾಳಜಿ ಅಗತ್ಯವಾಗಿದ್ದು, ಗ್ರಾಮ ಪಂಚಾಯತಿಯವರು ಶಾಲೆಗಳಿಗೆ ಮೂಲಭೂತ ಸೌಲಭ್ಯಗಳ ವ್ಯವಸ್ಥೆ ಮಾಡಬೇಕೆಂದು ಬಿಇಒ ಎ.ಕೆ. ಬಸಣ್ಣವರ ಹೇಳಿದರು.

ಹನಗಂಡಿ ಗ್ರಾಮ ಪಂಚಾಯತಿ ಗ್ರಾಮ ಸಭೆಯ ನೋಡಲ್ ಅಧಿಕಾರಿಯಾಗಿ ಆಗಮಿಸಿ ಸಭೆಯಲ್ಲಿ ಮಾತನಾಡಿದರು.

ಶಾಲೆಗಳಿಗೆ ಸೌಲಭ್ಯಗಳನ್ನು ಗ್ರಾಪಂ ಮಾಡಿದರೆ ಎಸ್ಡಿಎಂಸಿಯವರು ಅವುಗಳನ್ನು ಸರಿಯಾಗಿ ಸದ್ಬಳಿಕೆ ಮಾಡಿಕೊಳ್ಳಬೇಕು. ಶಿಕ್ಷಕರು ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವ ಕೆಲಸ ಮಾಡಬೇಕೆಂದು ಸಲಹೆ ಮಾಡಿದರು. ಗ್ರಾಮದಲ್ಲಿನ ಹಲವು ಸಮಸ್ಯೆಗಳ ಕುರಿತು ಮಾಹಿತಿ ಪಡೆದ ನೋಡಲ್ ಅಧಿಕಾರಿ, ಮೇಲಾಧಿಕಾರಿಗಳ ಗಮನಕ್ಕೆ ತಂದು ಹಂತ ಹಂತವಾಗಿ ಈಡೇರಿಸುವ ಭರವಸೆ ನೀಡಿದರು. ಸಮಾಜ ಕಲ್ಯಾಣ, ಪೊಲೀಸ್, ಹೆಸ್ಕಾಂ, ಕೆಎಸ್ಆರ್‌ಟಿಸಿ, ಕಾರ್ಮಿಕ, ರೇಷ್ಮೆ, ಅರಣ್ಯ ಸೇರಿದಂತೆ ಹಲವು ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡು ಸಮಸ್ಯೆಗಳ ಕುರಿತು ಗ್ರಾಮಸ್ಥರೊಂದಿಗೆ ಚರ್ಚಿಸಿದರು. ಗ್ರಾಪಂ ಅಧ್ಯಕ್ಷೆ ಮಹಾದೇವಿ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಪಿಡಿಒ ಪ್ರಹ್ಲಾಹ ರಾವಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಸದಸ್ಯರಾದ ಚಂದ್ರಶೇಖರ ಗುಬಚಿ, ಧರೇಶ ಹುದ್ದಾರ, ಕರೆಪ್ಪ ದಳವಾಯಿ, ಕಮಾಲಸಾಬ ರಾಮದುರ್ಗ, ರಾಬಿಯಾ ಅಲಾಸ, ಮಹಾದೇವಿ ಗುಬಚಿ, ಸಿದ್ದಪ್ಪ ಸೋರಗಾಂವಿ, ಶಿಕ್ಷಣ ಸಂಯೋಜಕ ಶ್ರೀಶೈಲ ಬುರ್ಲಿ, ಬಿ.ಎಂ. ಹಳೇಮನಿ, ಮಲ್ಲಿಕಸಾಬ ನದಾಫ ಮತ್ತಿತರಿದ್ದರು.

## ಸಾವಿತ್ರಿಬಾಯಿ ಫುಲೆ ಜನ್ಮದಿನ ಆಚರಣೆ



ಇಳಕಲ್: ನಗರದ ಮೌಲಾನಾ ಆಜಾದ ಆಂಗ್ಲ ಮಾಧ್ಯಮ ಮಾದರಿ ಶಾಲೆಯಲ್ಲಿ ಇಂದು ದೇಶದ ಮೊದಲ ಮಹಿಳಾ ಶಿಕ್ಷಕಿ ಸಾಮಾಜಿಕ ಸುಧಾರಣೆಯ ರೂವಾರಿ ಶ್ರೀಮತಿ ಸಾವಿತ್ರಿ ಬಾಯಿ ಫುಲೆ ಅವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

ಶಿಕ್ಷಕಿ ಫರಜಾನ ಸೋಲಾಪೂರ ಸಾವಿತ್ರಿಬಾಯಿ ಫುಲೆ ಅವರ ಜೀವನಗಾಥೆ ಅವರು ಎದುರಿಸಿದ ಸಮಸ್ಯೆಗಳನ್ನು ವಿವರಿಸಿದರು.ಶಿಕ್ಷಕಿಯರಾದ ರತ್ನಾ ಹಣಗಿ, ಶ್ರೀಮತಿ ಕರ್ನೂಲ್, ಅಮರೇಶ,ಮೆಹಬೂಬ ಗಂಜಿಕೋಟಿ, ಅತಾರಸೂಲ್ ಕರ್ನೂಲ್, ಮಾಹಿತಿ ಕೇಂದ್ರದ ಕೆ.ಎಚ್ ಸೋಲಾಪೂರ ಉಪಸ್ಥಿತರಿದ್ದರು. ಮಹೇಶ್ವರಿ ತೋಟಗಂಟಿಮಠ ಪ್ರಾರ್ಥಿಸಿದರು, ಮರಿಯಂ ನದಾಫ ಸ್ವಾಗತಿಸಿದರು.ಆಶಾ ಬೋದೂರ ವಂದಿಸಿದರು.

## ಸದ್ಗುರುವಿನ ನಡೆ ನುಡಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ



ರಬಕವಿ-ಬನಹಟ್ಟಿ: ಸದ್ಗುರುವಿನ ಜೀವನವನ್ನು ಅರಿತುಕೊಳ್ಳುವುದರ ಜೊತೆಗೆ ಅವರ ನಡೆ ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ನಾವು ಅವರಿಗೆ ನೀಡುವ ಬಹುದೊಡ್ಡ ಗೌರವವಾಗಿದೆ ಎಂದು ದಾವಣಗೇರಿಯ ಜಡಿಸಿದ್ಧ ಮಠದ ಶಿವಾನಂದ ಸ್ವಾಮೀಜಿ ತಿಳಿಸಿದರು.

ಬನಹಟ್ಟಿಯ ಅಕ್ಕಲಕೋಟ ಶರಣರು ಸ್ಥಾಪಿಸಿದ ಸಿದ್ಧಾರೂಢ ಮಠದಲ್ಲಿ ಸಿದ್ಧೇಶ್ವರ ಸ್ವಾಮೀಜಿಯವರ ಪುಣ್ಯಸ್ಮರಣೆ ಕುರಿತು ಮೂರು ದಿನಗಳ ಪ್ರವಚನದ ಮುಕ್ತಾಯ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂದಿನ ದಿನಗಳಲ್ಲಿ ನಾವು ನೆಮ್ಮದಿಯ ಜೀವನಕ್ಕಾಗಿ ಪ್ರಾರ್ಥನೆ, ಚಿಂತನೆ ಮತ್ತು ಧ್ಯಾನಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕಾಗಿದೆ. ಇವುಗಳಿಂದ ಮನಸ್ಸು ಸ್ಥಿರವಾಗಿ ಇರುತ್ತದೆ. ಯಾವ ವ್ಯಕ್ತಿಯ ಹೃದಯ ವಿಶಾಲವಾಗಿರುತ್ತದೆಯೋ ಅವರು ಮಹಾತ್ಮರಾಗುತ್ತಾರೆ. ಮಹಾತ್ಮರನ್ನು ನೆನೆಯುವುದೇ ಘನಮುಕ್ತಿಯಾಗಿದೆ.

ನಾವು ನಮ್ಮ ಶರೀರವನ್ನು ಉಪಯೋಗ ಮಾಡಿಕೊಳ್ಳಬೇಕು. ಆದರೆ ಉಪಭೋಗ ಮಾಡಕೂಡದು. ಶರೀರ ರೋಗಗ್ರಸ್ಥವಾಗಿದ್ದು , ಸಂಸಾರ ದುಃಖಮಯವಾಗಿದೆ. ಶರೀರಕ್ಕೆ ಬೆಲೆ ಬರಬೇಕಾದರೆ ನಾವೆಲ್ಲರೂ ಸತ್ಯದ ದರ್ಶನ ಮಾಡಿಕೊಳ್ಳಬೇಕು. ಸಿದ್ಧೇಶ್ವರ ಸ್ವಾಮೀಜಿಯವರ ಸರಳ ಬದುಕನ್ನು ಎಲ್ಲರೂ ಅನುಸರಿಸಿಕೊಂಡರೆ ನಾವು ಕೂಡಾ ಜೀವನದಲ್ಲಿ ಮಹತ್ವದ ಸಾಧನೆಯನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಶಿವಾನಂದ ಸ್ವಾಮೀಜಿ ತಿಳಿಸಿದರು.

ವಿರೂಪಾಕ್ಷಪ್ಪ ಕೊಕಟನೂರ, ಮಹಾದೇವ ಬಾಣಕಾರ, ರಮೇಶ ಕೊಣ್ಣೂರ, ವೈ. ಬಿ. ಕೊರಡೂರ, ಬಸಪ್ಪ ಕೊಣ್ಣೂರ, ರವಿ ಕೊಣ್ಣೂರ , ಮಹಾದೇವಿ ಗಸ್ತಿ , ಮಹಾನಂದಾ ಕುಳ್ಳಿ , ಉಮಾ ಬಾವಲತ್ತಿ , ಮಹಾದೇವಿ ಕಾಡದೇವರ, ಕಮಲಾ ಹಾರೂಗೇರಿ, ಶಿವಪ್ಪ ಹಕ್ಕಲದಡ್ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಅಲ್ಪಸಂಖ್ಯಾತ ಕಾನೂನು ಪದವೀಧರರ ತರಬೇತಿಗೆ ಅರ್ಜಿ ಆಹ್ವಾನ

ಬಾಗಲಕೋಟೆ : ಅಲ್ಪಸಂಖ್ಯಾತರ ಕಾನೂನು ಪದವೀಧರರ ತರಬೇತಿ ಭತ್ಯೆಗಾಗಿ 2023-2024 ನೇ ಸಾಲಿಗೆ ಅರ್ಹ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಪಾರ್ಸಿ ಹಾಗೂ ಸಿಖ್ ಸಮುದಾಯದ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜನೇವರಿ 16 ಕೊನೆಯ ದಿನವಾಗಿರುತ್ತದೆ. ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಬಾರ್ ಕೌನ್ಸಿಲ್ ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿರಬೇಕು ಮತ್ತು ತರಬೇತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ 30 ವರ್ಷ ವಯೋಮಿತಿ ಮೀರಿರಬಾರದು. ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್/ಸರಕಾರಿ ವಕೀಲರು ಅಥವಾ ಕನಿಷ್ಠ 20 ವರ್ಷಗಳ ವಕೀಲ ವೃತ್ತಿಯಲ್ಲಿ ಅನುಭವವುಳ್ಳ ಯಾವುದೇ ಹಿರಿಯ ವಕೀಲರ ಅಧೀನದಲ್ಲಿ ತರಬೇತಿಗೆ ನಿಯೋಜಿಸಲಾಗುವುದು.

ಆಸಕ್ತ ಕಾನೂನು ಪದವೀಧರರು ನಿಗಧಿತ ಅರ್ಜಿಗಳನ್ನು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಮೌಲಾನಾ ಆಜಾದ ಭವನ, ಡಿ ಸಿ ಕಛೇರಿ ಆವರಣ ಬಾಗಲಕೋಟೆ ಇವರಿಂದ ಪಡೆದು ನಿಗಧಿಪಡಿಸಿದ ದಿನಾಂಕದೊಳಗೆ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ದೂರವಾಣಿ ಸಂಖ್ಯೆ 08354-200044 ಸಂಪರ್ಕಿಸುವಂತೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಶಿವಾನಂದ ಪಟ್ಟಣಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾಲುವೆ ನೀರು, ರೈತರಲ್ಲಿ ಸಂತಸ




ತೇರದಾಳ : ಹಿಡಕಲ್ ಜಲಾಶಯದಿಂದ ಘಟಪ್ರಭಾ ಎಡದಂಡೆ ಕಾಲುವೆಗೆ ಜ. 1ರಿಂದ ನೀರು ಬಿಡಲಾಗಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ಹದಿನೈದು ದಿನಗಳ ಕಾಲ ನೀರು ಹರಿಯಲಿದ್ದು, ಸುತ್ತಮುತ್ತಲ್ಲಿನ ಗ್ರಾಮಗಳ ಕೆರೆಗಳಿಗೆ ಹಾಗೂ ಪಟ್ಟಣದಲ್ಲಿನ ಕೆರೆಗಳಿಗೆ ನೀರು ತುಂಬಿಸಲು ಆಯಾ ಅಧಿಕಾರಿಗಳು ಹರಸಾಹಸ ಪಡುತ್ತಿದ್ದಾರೆ. ರೈತರಿಂದ ನೀರು ಬಿಡಿಸಿಕೊಂಡು ಬರುವುದು ಅಷ್ಟೊಂದು ಸುಲಭದ ಮಾತು ಅಲ್ಲ ಎಂದು ಅಧಿಕಾರಿಗಳು ಪ್ರಮುಖ ಕಾಲುವೆ ಬಳಿ ಬೀಡು ಬಿಟ್ಟು ಕುಳಿತುಕೊಳ್ಳುತ್ತಿದ್ದಾರೆ. ಇತ್ತ ರೈತರು ಕೂಡ ಬೆಳೆಗಳಿಗೆ ನೀರು ಉಣಿಸಲು ರಾತ್ರಿಯಿಡಿ ಹೈರಾಣ ಆಗುತ್ತಿದ್ದಾರೆ. 15 ದಿನಗಳ ಕಾಲ ನೀರು ಹರಿಯುವುದರಿಂದ ಬಾವಿ ಹಾಗೂ ಕೊಳವೆ ಬಾವಿಗಳ ಅಂತರ್ಜಲಮಟ್ಟ ಹೆಚ್ಚಳಗೊಳ್ಳುತ್ತದೆ ಎಂಬ ಆಸೆ ರೈತರದ್ದು. ಬೇಸಿಗೆಯಲ್ಲಿ ನೀರಿನ ಭವಣೆ ಆಗಬಾರದು ಎಂಬ ಉದ್ದೇಶದಿಂದ ಸ್ಥಳೀಯ ಸಂಘ ಸಂಸ್ಥೆಗಳ ಅಧಿಕಾರಿಗಳು ಕೆರೆಗಳಿಗೆ ನೀರು ತುಂಬಿಸುವ ಕೆಲಸಕ್ಕೆ ಮುಂದಾಗಿದ್ದಾರೆ. ಮೈ ಕೊರೆಯುವ ಚಳಿಯಲ್ಲಿ ರಾತ್ರಿ ವೇಳೆ ರೈತರು ಕಾಲುವೆ ಹತ್ತಿರ ಕಾವಲು ಕೂಡುವ ಸ್ಥಿತಿ ನಿರ್ಮಾಣವಾಗಿದೆ. ಈಗಲೇ ಹೀಗೆ. ಬೇಸಿಗೆಯಲ್ಲಿ ನಮ್ಮ ಗತಿ ಏನು ಎಂಬ ಆತಂಕ ರೈತರದ್ದಾಗಿದೆ.

## ಮತ್ತೊಂದು ಬೃಹತ್ ಸಾಮರ್ಥ್ಯದ ಸಿಮೆಂಟ್ ಕಾರ್ಖಾನೆ ಶೀಘ್ರ ಕಾರ್ಯಾರಂಭ: ನಿರಾಣಿ



ಮುಧೋಳ : ಒಂದು ಮಿಲಿಯನ್ ಟನ್ ಸಾಮರ್ಥ್ಯದ ನೂತನ ಸಿಮೆಂಟ್ ಕಾರ್ಖಾನೆ ನಿರ್ಮಾಣ ಕಾರ್ಯ ಶೀಘ್ರ ಪ್ರಾರಂಭಿಸಲಾಗುವುದು ಎಂದು ಎಂ ಆರ್ ಎನ್ ಗ್ರುಪ್ಪಿನ ಕಾರ್ಯನಿರ್ವಾಹಕ ನಿದೇ9ಶಕ ಸಂಗಮೇಶ ನಿರಾಣಿ ತಿಳಿಸಿದರು.

ಅವರು ರತ್ನಾ ಸಿಮೆಂಟ್ ನ ಸಾಮರ್ಥ್ಯ ಹೆಚ್ಚಳದ ನಂತರ ನೂತನ ಕಿಲ್ನ್ ಪ್ರದೀಪನ ಮಾಡಿ ನಂತರ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು. ಮುರುಗೇಶ ನಿರಾಣಿಯವರು ಕಾರ್ಮಿಕರ ಬಗ್ಗೆ ಹೆಚ್ಚು ಕಾಳಜಿಯುಳ್ಳವರಾಗಿದ್ದು ಪಾಳುಬಿದ್ದ ಕಾರ್ಖಾನೆಗಳನ್ನು ಮರುಪ್ರಾರಂಭಿಸಿ ಅಲ್ಲಿನ ಕಾರ್ಮಿಕರಿಗೆ ಬದುಕು ಕಟ್ಟಿಕೊಡುವ ಕೆಲಸ ಮಾಡಿದ್ದಾರೆ. ಈ ಮೂಲಕ ಸಾವಿರಾರು ಕಾರ್ಮಿಕರಿಗೆ ಆಸರೆಯಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಪ್ರಮುಖರಾದ ಈಶ್ವರ ಕತ್ತಿ , ಬಸವರಾಜ ದಲಾಲ, ಬಸವರಾಜ ಮಹಾಲಿಂಗೇಶ್ವರಮಠ, ಮಲ್ಲು ಕಲ್ಯಾಣಿ, ಯಮನಪ್ಪ ಹೊರಟ್ಟಿ , ಈರಣ್ಣ ನಿಜಗುಣಿ,

ಯುನಿಟ್ ಹೆಡ್ ಸೀತಾರಾಮರಾವ್, ಜನರಲ್ ಮ್ಯಾನೇಜರ್ ಸುಜಯ್ ಹೆಬಸೂರ, ಟೆಕ್ನಿಕಲ್ ಹೆಡ್ ಶ್ರೀನಿವಾಸ, ಮಾರ್ಕೆಟಿಂಗ್ ಜಿ ಎಂ ಮೋಹನ್ ಕೊಂಡ್ಲಿ,

ಪ್ರೋಸೆಸ್ ಮುಖ್ಯಸ್ಥ ಎಂ. ಕೆ. ದೇಶಪಾಂಡೆ, ಪ್ರೊಡಕ್ಷನ್ ಮುಖ್ಯಸ್ಥ ಯು. ಕೆ. ಸೋನಿ, ಸ್ಟೋರ ಮುಖ್ಯಸ್ಥ ಎಸ್. ರಾಮಮೂರ್ತಿ, ಇಲೆಕ್ಟ್ರಿಕ್ ಮುಖ್ಯಸ್ಥ ಪ್ರದೀಪ್, ಅಕೌಂಟ್ಸ ಮುಖ್ಯಸ್ಥ ರಾಜು ಪವಾರ್, ಪಿ. ಎಚ್. ಪಾಟೀಲ, ಶ್ರೀಕಾಂತ್ ಗೋಡಿ, ಬಿ. ಎಚ್. ಹೊಸಮನಿ, ಆಯ್. ಬಿ. ಮೋತೀಕಾರ, ಆರ್. ಎನ್. ಜೋಶಿ, ಸಿ. ಬಿ. ಮೂಡಲಗಿ, ಶ್ರೀಶೈಲ ಗಾಣಿಗೇರ , ಹಣಮಂತ ಕವಣಿ , ಹಣಮಂತ ಪೂಜಾರಿ , ಆನಂದ ನಂದಗಾಂವ , ಕಲ್ಮೇಶ ಉಪ್ಪಾರ, ಆರ್. ಬಿ. ಕುಲಕರ್ಣಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಅನಾಥ ಮಕ್ಕಳಿಗೆ ಶೈಕ್ಷಣಿಕ ಕಿಟ್ ವಿತರಿಸಿದ ಕುಲಕರ್ಣಿ ದಂಪತಿ




ಜಮಖಂಡಿ : ತಾಲೂಕು ಅಷ್ಟೇ ಅಲ್ಲದೇ ಇತರೆ ಜಿಲ್ಲೆಗಳವರೆಗೂ ಹೋಗಿ ತಮ್ಮ ಸಮಾಜ ಸೇವೆಯನ್ನು ವಿಸ್ತರಿಸುವ ಮೂಲಕ ಇತರರಿಗೆ ಮಾದರಿಯಾಗಿರುವ ಜಮಖಂಡಿ ನಗರದ ಶಿಕ್ಷಕ ದಂಪತಿಗಳಾದ ನಾರಾಯಣ ಕುಲಕರ್ಣಿ ಹಾಗೂ ವನಜಾ ಕುಲಕರ್ಣಿ ಅವರ ಸೇವೆ ಎಲ್ಲರೂ ಮೆಚ್ಚುವಂತಹದ್ದು. ತಮ್ಮ ಶ್ರೀ ಶಾರದಾ ಸೇವಾ ಸಂಸ್ಥೆ ವತಿಯಿಂದ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಈ ದಂಪತಿಗಳು ಈಗ ತಮ್ಮ ತಾಲೂಕು, ಜಿಲ್ಲೆಯಲ್ಲಿ ಅಷ್ಟೇ ಅಲ್ಲದೆ ಇದೀಗ ಬೆಳಗಾವಿಯ ಜಿಲ್ಲೆಯ ಐನಾಪೂರದ ಗುರು ದೇವಾಶ್ರಮದಲ್ಲಿ ಕಾಗವಾಡ ತಾಲೂಕಿನ ಎಲ್ಲ ಅನಾಥ ಮಕ್ಕಳಿಗೆ ಒಂದು ವರ್ಷಕ್ಕೆ ಆಗುವಷ್ಟು ಸಂಪೂರ್ಣ ಶೈಕ್ಷಣಿಕ ಕಿಟ್ ವಿತರಣಾ ಸಮಾರಂಭ ಏರ್ಪಡಿಸುವ ಮೂಲಕ ಹೊಸ ವರ್ಷದಲ್ಲಿ ಎಲ್ಲರೂ ಮೆಚ್ಚುವಂತಹ ಸಾಮಾಜಿಕ ಕಾರ್ಯ ಮಾಡಿದ್ದು ಹೆಮ್ಮೆಯ ವಿಷಯವಾಗಿದೆ.

ಸದರಿ ಕಾರ್ಯಕ್ರಮ ಉದ್ದೇಶಿಸಿ ಶಿಕ್ಷಕ ನಾರಾಯಣ ಕುಲಕರ್ಣಿಯವರು ಮಾತನಾಡಿ, ಈಗಾಗಲೇ ಬಾಗಲಕೋಟೆ ಜಿಲ್ಲೆಯ ಜಮಖಂಡಿ ಹಾಗೂ ರಬಕವಿ ಬನಹಟ್ಟಿ, ಮುಧೋಳ ಹೀಗೆ ಎಲ್ಲ ಅನಾಥ ಮಕ್ಕಳಿಗೆ ಶೈಕ್ಷಣಿಕ ಕಿಟ್ ವಿತರಣೆ ಮಾಡಲಾಗಿದ್ದು , ಕೇವಲ ನಮ್ಮ ಜಿಲ್ಲೆಗಷ್ಟೆ ನಮ್ಮ ಸಮಾಜ ಸೇವೆ ಮೀಸಲಾಗಿರದೆ ಪಕ್ಕದ ಬೆಳಗಾವಿ ಜಿಲ್ಲೆಗೂ ನಮ್ಮ ಅಳಿಲು ಸೇವೆ ತಲುಪಲಿ ಎಂಬ ಉದ್ದೇಶದಿಂದ ಕಾಗವಾಡ ತಾಲೂಕಿನ ಅನಾಥ ಮಕ್ಕಳಿಗೆ ಶೈಕ್ಷಣಿಕ ಕಿಟ್ ವಿತರಣೆ ಮಾಡಿದ್ದೇವೆ ಎಂದರು.

ವರ್ಷದ ಮೊದಲ ದಿನ ಈ ಸಮಾರಂಭ ಹಮ್ಮಿಕೊಂಡಿದ್ದು ನಮಗೆ ಸಂತಸ ತಂದಿದೆ ಎಂದರು. ಕಳೆದ ಒಂದು ವಾರದ ಹಿಂದೆ ಜಮಖಂಡಿ ನಗರದಲ್ಲಿ ಬೀದಿ ಬದಿ ಇರುವ ಬಡ ಜನರು ಕೊರೆಯುವ ಚಳಿಯಲ್ಲಿ ದಿನ ನಿತ್ಯ ಜೀವನ ಸಾಗಿಸುತ್ತಿದ್ದರು. ಅಂತಹ ವ್ಯಕ್ತಿಗಳನ್ನು ಗುರುತಿಸಿ ಚಾದರ್ ಹಾಗೂ ಸ್ಕಾರ್ಫ್ ಗಳನ್ನು ಅವರು ಇದ್ದಲ್ಲಿಯೇ ಹೋಗಿ ನೀಡಿದ್ದೇವೆ. ನಮಗೆ ಈ ಸಾಮಾಜಿಕ ಕಾರ್ಯ ತೃಪ್ತಿ ತಂದಿದೆ ಎಂದರು. ಹಾಗೂ ಪ್ರತಿಯೊಬ್ಬರೂ ಕೂಡಾ ಪರಿಸರದ ಬಗ್ಗೆ ಜಾಗೃತಿ ವಹಿಸಬೇಕು.

ಅಂದಾಗ ಮಾತ್ರ ನಾವು ಆರೋಗ್ಯವಾಗಿ ಸದೃಢವಾಗಲು ಸಾಧ್ಯವೆಂದು ಹೇಳಿದರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಶ್ರೇಷ್ಠ ಕೃಷಿಕ, ಶ್ರೇಷ್ಠ ಸೈನಿಕ ಹಾಗೂ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಪರಮಪೂಜ್ಯ ಶ್ರೀ ಬಸವೇಶ್ವರ ಮಹಾಸ್ವಾಮೀಜಿಯವರು ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎಮ್. ಆರ್. ಮುಂಜೆ , ಬಸವರಾಜ ಬಾಗೆನ್ನವರ, ಕಿರಣ ಗಾಣಿಗೇರ, ಎಮ್. ಜಿ. ಸಂಕಪಾಳ , ಆನಂದ ದೇಶಮುಖ, ಶಿವು ಯಾದವಾಡ, ನದಾಫ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಶಿಕ್ಷಣದ ಮೂಲಕ ಬದುಕ ಕಟ್ಟಿಕೊಳ್ಳಿ: ಡಾ.ಬಾಗೇಶ ಮುರಡಿ



ತಿಕೋಟಾ : ಪಟ್ಟಣದ ಬಿ.ಎಲ್.ಡಿ.ಇ ಸಂಸ್ಥೆಯ ನೂತನ ಕಲಾ ಮಹಾವಿದ್ಯಾಲಯದಲ್ಲಿ ದಿನಾಂಕ 5-1-2024 ರಂದು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಮಹಾವಿದ್ಯಾಲಯದ ಸಭಾ ಭವನದಲ್ಲಿ ಬಿ.ಎ ಹಾಗೂ ಬಿ.ಕಾಂ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭದಲ್ಲಿ ಎಸ್.ಬಿ. ವಿಸಡಂ ಅಕಾಡೆಮಿ ವಿಜಯಪುರ ಹಾಸ್ಯ ಕಲಾವಿದ, ಕನ್ನಡ ಉಪನ್ಯಾಸಕರಾದ ಡಾ.ಬಾಗೇಶ ಮುರಡಿ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ, ಮಣ್ಣಿನ ಮಡಿಕೆಗೆ ಅಕ್ಕಿ ತುಂಬುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಜೀವನದಲ್ಲಿ ಸುಖವನ್ನು ಅರಸಿ ಹೊರಟರೆ ವಿದ್ಯೆ ಹತ್ತುವುದಿಲ್ಲ, ವಿದ್ಯೆ ಸಿಗಬೇಕೆಂದರೆ ಹಾಯಾಗಿ ಇರುವ ಯೋಚನೆಯನ್ನು ಬಿಡಬೇಕು.

ಶ್ರೇಷ್ಠ ಸಾಧನೆಗೆ ಜೀವನದಲ್ಲಿ ಮೂರು ವಿಘ್ನಗಳಿರುತ್ತವೆ. ಆಕಳಿಕೆ, ಬೇಕರಿಕೆ,ಮತ್ತು ತೂಕಡಿಕೆ ಈ ಮೂರುಗಳನ್ನು ನಿಗ್ರಹಿಸಿಕೊಳ್ಳಿ ತಂದೆ-ತಾಯಿಗಳ ಋಣ ತೀರಿಸುವ ಮಕ್ಕಳು ನೀವಾಗಿರಿ. ವಿದ್ಯಾರ್ಥಿಗಳು ಕಾಲೇಜಿನ ಗ್ರಂಥಾಲಯವನ್ನು ಇದಕ್ಕೆ ಬಳಸಿಕೊಳ್ಳುವ ಮೂಲಕ ಸಾಧನೆಯತ್ತ ಗಮನ ಹರಿಸಬೇಕು. ಬಡತನ, ಅವಮಾನವನ್ನು ಲೇಕ್ಕಿಸದೇ ಸಾಧನೆ ಮಡಿದ ಅನೇಕ ಮಂದಿ ನಮ್ಮ ಸುತ್ತಮುತ್ತಾಲಿದ್ದಾರೆ. ಪೆಟ್ಟು ತಿಂದಿದ್ದಕ್ಕೆ ಕಲ್ಲು ವಿಗ್ರಹ ವಾಯಿತು. ಅದೇ ರೀತಿ ನೋವನ್ನು ಉಂಡವರು ಸಾಧಕರಾಗುತ್ತಾರೆ.

ಅಂತಹ ಸಾಧಕರಲ್ಲಿ ನೀವು ಒಬ್ಬರಾಗಿ ಎಂದು ಹೇಳಿದರು. ಕನ್ನಡ ವಿಭಾಗದ ಮುಖ್ಯಸ್ಥರು, ಸಾಂಸ್ಕೃತಿಕ ಘಟಕದ ಅಧ್ಯಕ್ಷರಾದ ಡಾ.ಬಸವರಾಜ ಸಾಲವಾಡಗಿ ಆಸೆಯ ನುಡಿಗಳನಾಡಿದ ಅವರು ನಾವು ನಮ್ಮಲ್ಲಿರುವ ಸಂಪನ್ಮೂಲಗಳ ಕೊರತೆ ಎದುರಾಗುವ ಸಮಸ್ಯೆಗಳನ್ನು ಕಂಡು ಕೊರಗುವ ಬದಲು ಅವುಗಳನ್ನೇ ಅವಕಾಶಗಳನ್ನಾಗಿಸಿ ಕೊಳ್ಳುವ ಮನಸು ನಮಗಿರಬೇಕು. ಎಂತಹ ಕಠಿಣ ಸಂದರ್ಭದಲ್ಲೂ ಧೃತಿಗೆಡದೆ ಮುನ್ನೆಡೆದರೆ, ಇಂದಲ್ಲಾ, ನಾಳೆ ಯಶಸ್ಸು ನಮ್ಮದಾಗುತ್ತದೆ.

ಸೋಲಿಗೆ ಅಂಜಬೇಡ ನಾನು ಹುಟ್ಟಿರುದೇ ಸಾಧಿಸುವುದಕ್ಕಾಗಿ ಎಂದು ಭಾವಿಸು, ಇನ್ನು ಕಾಲ ಮಿಂಚಿಲ್ಲ ಮುನ್ನೆಡೆ, ಯಶಸ್ಸು ನಿನ್ನದಾಗುತ್ತದೆ. ವಿದ್ಯಾರ್ಥಿಗಳೇ ನಿಮ್ಮದಾಗಲಿ ನಿಮ್ಮ ಜೀವನ ಉಜ್ವಲವಾಗಲಿ ಎಂದು ಹಾರೈಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಶ್ರೀ ಆರ್.ಬಿ.ಸಿರಸಂಗಿಯವರು ನಮ್ಮ ಮಹಾವಿದ್ಯಾಲಯದಲ್ಲಿ ಎಲ್ಲ ಮೂಲಭೂತ ಸೌಕರ್ಯಗಳು ಇವೆ. ಒಳ್ಳೆಯ ಬೋಧಕ, ಬೋಧಕೇತ ಸಿಬ್ಬಂದಿಗಳಿದ್ದು ಅವರುಗಳ ಸದುಪಯೋಗವನ್ನು ನಮ್ಮ ವಿದ್ಯಾರ್ಥಿಗಳು ಪಡಿಸಿಕೊಂಡು ನಿಮ್ಮ ತಂದೆ-ತಾಯಿಗೂ ಹಾಗೂ ಮಹಾವಿದ್ಯಾಲಯಕ್ಕೂ ಕೀರ್ತಿ ತರುವಂತವರಾಗಿರಿ ಎಂದು ಹೇಳಿದರು. ಮಹಾವಿದ್ಯಾಲಯದ ಎಲ್ಲ ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಹಾರೂಗೇರಿಯ ಕಸ ವಿಲೇವಾರಿಗೆ ಹತ್ತಾರು ವಿಘ್ನಗಳು

ಹಾರೂಗೇರಿ : ಪಟ್ಟಣದ ವಿವಿಧ ವಾರ್ಡಗಳಲ್ಲಿ ಕಸ ವಿಲೇವಾರಿ ಮಾಡುವ ವಾಹನ ಸರಿಯಾಗಿ ಬರುತ್ತಿಲ್ಲ. ಕೊನೆ ಪಕ್ಷ ಎರಡು ದಿನಗಳಿಗೆ ಒಮ್ಮೆಯಾದರೂ ವಾಹನ ಬಂದರೆ ಕಸವನ್ನು ಚೆಲ್ಲಿ ನಾವು ಮನೆ ಸ್ವಚ್ಛವಾಗಿಟ್ಟು ಕೊಳ್ಳಬಹುದು. ವಾರಕ್ಕೆ ಒಮ್ಮೆಯಾದರೂ ಚರಂಡಿಗಳನ್ನು ಸ್ವಚ್ಚ ಮಾಡಿದರೆ ಸೊಳ್ಳೆಗಳ ಕಾಟದಿಂದ ಹಾಗೂ ವಾಯು ಮಾಲಿನ್ಯದಿಂದ ತಪ್ಪಿಸಿಕೊಳ್ಳಬಹುದು ಎಂದು ಹಲವಾರು ವಾರ್ಡಗಳ ಜನತೆ ಇದೀಗ ಪುರಸಭೆಯನ್ನು ಕೇಳಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಪಟ್ಟಣದ ಆಧಾರ್ ಹಿರಿಯ ನಾಗರಿಕರ ಸಂಘ ಹಾಗೂ ಅಪ್ಪಾಜಿ ಯೂಥ್ ಫೌಂಡೇಶನ್ ಮುಂತಾದ ಸಂಘಗಳು ಪುರಸಭೆಗೆ ಮನವಿ ಸಲ್ಲಿಸಿದರೂ ಕೂಡ ಯಾವುದೇ ಪ್ರಯೋಜನವಾಗಿಲ್ಲ. ಇದೀಗ ಬಡಬ್ಯಾಕೂಡ ರಸ್ತೆಯ ಬಾಗೇವಾಡಿ, ಮಠಪತಿ ಅವರ ಮನೆ ಹಾಗೂ ಆಜೂರ ಶಾಲೆ ಪಕ್ಕದ ರಸ್ತೆ , ಎರಡನೇ ವಾಡಿ9ನ ಚರಂಡಿಗಳು, ಮೂರನೇ ವಾರ್ಡ್ ನಲ್ಲಿನ ಕಿನಾಲ್ ನಂತೆ ಹರಿಯುತ್ತಿರುವ ಚರಂಡಿ ಮತ್ತು ಹಳೆ ಜೈನ ಬಸದಿ ರಸ್ತೆಯ ಮನೆಗಳ ಕಸ ವಿಲೇವಾರಿ, ಎರಡನೇ ವಾರ್ಡ್ ನಲ್ಲಿನ ಕಬ್ಬೂರ ಅವರ ಮನೆ ಮುಂದಿನ ಚರಂಡಿಗೆ ಆದೇಶವಾದರೂ ಇನ್ನೂ ಕಾಮಗಾರಿ ಆಗದೇ ಇರುವುದು. ವಿದ್ಯಾನಗರದ ತುಳಸಿಗೇರಿಯವರ ಕಾಲೋನಿಯ ಕಸ ವಿಲೇವಾರಿ, ಮುಖ್ಯ ರಸ್ತೆಯಲ್ಲಿರುವ ಗ್ಲೋಬಲ್ ಮೊಬೈಲ್ ಅಂಗಡಿಯ ಮುಂದಿನ ಕಸ ವಿಲೇವಾರಿ ಹೀಗೆ ಹತ್ತು ಹಲವಾರು ಸಮಸ್ಯೆಗಳನ್ನು ಹೊತ್ತು ಮೇಲೆ ಸಿಂಗಾರಗೊಂಡ ಬಂಗಾರದಂಥ ಗೊಂಬೆಯಂತೆ ಹೊಳೆಯುವ ಹಾರೂಗೇರಿ ಪಟ್ಟಣಕ್ಕೆ ಉತ್ತಮವಾಗಿ ಕಾರ್ಯನಿರ್ವಹಿಸುವ ಒಬ್ಬ ಆರೋಗ್ಯ ಅಧಿಕಾರಿ ಹಾಗೂ ಪ್ರಾಮಾಣಿಕ ಸೇವೆ ಮಾಡುವ ಕಾರ್ಮಿಕರ ಅವಶ್ಯಕತೆ ಇದೆ ಎನ್ನುತ್ತಾರೆ ಗಣ್ಯರಾದ ಬಸವರಾಜ ತುಳಸಿಗೇರಿಯವರು. ಹತ್ತಾರು ಸಲ ತಿಳಿಸಿದರೂ, ಮನವಿ ಮಾಡಿಕೊಂಡರೂ ಸ್ವಚ್ಛತೆಯ ಕಾರ್ಯದಲ್ಲಿ ಯಾವುದೇ ಸುಧಾರಣೆ ಆಗದೇ ಇರೋದು ವಿಪರ್ಯಾಸ.

ಒಟ್ಟು ನಾಲ್ಕು ಕಸದ ವಾಹನಗಳಿದ್ದು, ಅದರಲ್ಲಿ ಒಂದು ರಿಪೇರಿಗೆ ಹೋಗಿದ್ದು , ಇನ್ನೊಂದು ಡಕೋಟಾ ಆಗಿ ನಿಂತಿದೆ. ಈಗ ಸದ್ಯ ಎರಡೇ ವಾಹನ ಇಡೀ ಊರು ಸುತ್ತಬೇಕು. ನಾವಾದರೂ ಏನು ಮಾಡೋಣ. ಗುತ್ತಿಗೆ ಆಧಾರದಲ್ಲಿರುವ ನಮಗೂ ಆರು ತಿಂಗಳಿಂದ ಸಂಬಳವಾಗಿಲ್ಲ ಎನ್ನುತ್ತಾರೆ ಗುತ್ತಿಗೆ ಆಧಾರದ ಕಾರ್ಮಿಕರು.

**ಹೊಸ ವಾಹನಗಳ ಟೆಂಡರ್** : ಈಗಾಗಲೇ ಹೊಸ ವಾಹನಗಳಿಗೆ ಪ್ರಸ್ತಾವನೆ ತಯಾರಿಸಿ, ಟೆಂಡರ್ ಕರೆಯಲಾಗಿದೆ. ಆಟೋಮ್ಯಾಟಿಕ್ ಕಸ ಸಂಗ್ರಹಣೆ ಹಾಗೂ ನೂತನ ಕಸದ ವಾಹನಗಳು ಇನ್ನೇನು ಕೆಲವೇ ದಿನಗಳಲ್ಲಿ ಹಾರೂಗೇರಿಗೆ ಬರುತ್ತವೆ. ನಾವು ಬರಗಾಲದ ಈ ಸಮಯದಲ್ಲಿ ಈಗ ನೀರಿನ ಬವಣೆ ಸರಿದೂಗಿಸಲು ಶ್ರಮಿಸುತ್ತಿದ್ದೇವೆ. ಇನ್ನು ಮುಂದೆ ಯಾವುದೇ ರೀತಿಯ ಅನಾನು ಕೂಲತೆ ಆಗದಂತೆ ಕ್ರಮವಹಿಸು ತ್ತೇವೆಂದು ಮುಖ್ಯಾಧಿಕಾರಿಗಳು ಹೇಳಿದ್ದರೂ ಜನತೆ ಇನ್ನೂ ವಿಶ್ವಾಸವಿಟ್ಟಿಲ್ಲ. ಹಲವಾರು ಬಾರಿ ಕಳೆದೆರಡು ವರ್ಷಗಳಿಂದ ಈ ಸಮಸ್ಯೆಗಳನ್ನು ಹೇಳುತ್ತಿದ್ದರೂ ಕೂಡ ಇನ್ನೂ ಯಾವುದೇ ಬದಲಾವಣೆ ಆಗಿಲ್ಲವೆಂಬುದೇ ಆಶ್ಚರ್ಯಕರ. ಇನ್ನಾದರೂ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಯಶಸ್ವಿಯಾಗ್ತಾರಾ ಅಧಿಕಾರಿಗಳು ಎಂದು ಕಾದು ನೋಡಬೇಕು.





ಪುರಸಭೆಯ ಕಾರ್ಯಚಟುವಟಿಕೆಗಳಿಗೆ, ಯೋಜನೆಗಳಿಗೆ ಹಣದ ಕೊರತೆ ಇಲ್ಲಾ ಬದಲಾಗಿ ಸಿಬ್ಬಂದಿ ಕೊರತೆ ಇದೆ. ನಿಯಮ ಪ್ರಕಾರ ಒಬ್ಬರು ಹಿರಿಯ ಆರೋಗ್ಯ ಅಧಿಕಾರಿ ಹಾಗೂ ಇಬ್ಬರು ಆರೋಗ್ಯ ಅಧಿಕಾರಿಗಳು ಇರಬೇಕು ಆದರೆ ನಮಲ್ಲಿ ಅವರಿಲ್ಲ. ಇದರಿಂದಾಗಿ ಸಿಬ್ಬಂದಿ ಮೊನಟರಿಂಗ್ ಮಾಡೋದು ಕಷ್ಟ ಆಗಿದೆ. ಸಂಬಳಕ್ಕೆ ಸಂಬಂಧಿಸಿದಂತೆ ನಾವು ಈಗಾಗಲೇ ಚೆಕ್ ಬರಿದಿದ್ದೀವಿ ಆದರೆ ಗುತ್ತಿಗೆ ಆಧಾರದ ಮೇಲೆ ಟೆಂಡರ್ ಹಿಡಿದಿರುವವರು ಬಂದಿಲ್ಲ. ಅವರು ಬಂದರೆ ಈಗಲೇ ಕೊಡುವೆವು. ಅಲ್ಲದೆ ಖಾಯಂ ಕಾರ್ಮಿಕರ ಸಂಬಳ 1 ನೇ ತಾರೀಖಿಗೆ ಜಮಾ ಆಗಿರುತ್ತೆ ಅವರೇದೇನು ಸಮಸ್ಯೆಯಿಲ್ಲ.

**-ಅಭಿಷೇಕ ಪಾಂಡೆ, ಮುಖ್ಯಾಧಿಕಾರಿಗಳು, ಪುರಸಭೆ ಹಾರೂಗೇರಿ**

---

ಬಹಳ ದಿನಗಳಿಂದ ಕಸ ವಿಲೇವಾರಿ ವಾಹನ ಸರಿಯಾಗಿ ಬರುತ್ತಿಲ್ಲ. ಇದರಿಂದಾಗಿ ಮನೆಯಲ್ಲಿಯೇ ಕಸ ಇಟ್ಟು ಕುಳಿತ ನಮಗೆ ಸೊಳ್ಳೆಗಳ ಕಾಟ ವಿಪರೀತವಾಗಿದೆ. ಆದಷ್ಟು ಬೇಗ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಲಿ.

**– ನಿರಂಜನ ಬಾಗೇವಾಡಿ ವಾರ್ಡ್ 15 ರ ನಿವಾಸಿ.**





**ಬಾಗಲಕೋಟೆ : ಇಂದು ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಿಂದ ಹೆಲ್ಮೆಟ್ ಜಾಗೃತಿ ಅಭಿಯಾನ ಕುರಿತು ಪೊಲೀಸರಿಂದ ಬೈಕ್ ಜಾಥಾ ಅಭಿಯಾನ ನಡೆಯಿತು. ಪೊಲೀಸರಿಂದ ಬೈಕ್ ಜಾಥಾ ನವನಗರ, ವಿದ್ಯಾಗಿರಿ ಮತ್ತು ಹಳೇ ಬಾಗಲಕೋಟೆಯಲ್ಲಿ ಬೈಕ್ ರ್‍ಯಾಲಿ ಮುಗಿಸಿ ಹೊಳೆ ಆಂಜನೇಯ ದೇವಸ್ಥಾನವರೆಗೆ ನಡೆಯಿತು. ಪ್ರತಿಯೊಬ್ಬ ಸವಾರ ಮತ್ತು ಹಿಂಬದಿಯ ಸವಾರ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಈಗಾಗಲೇ ಹೆಲ್ಮೆಟ್ ಕಡ್ಡಾಯ ಮಾಡಲಾಗಿದ್ದು, ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಲಾಯಿಸಿದರೆ ಅಂತವರ ವಾಹನವನ್ನು ಜಪ್ತಿ ಮಾಡಿ ಅವರ ಮೇಲೆ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಿ, ದಂಡ ವಿಧಿಸಲಾಗುವುದು. ಪ್ರತಿಯೊಬ್ಬ ವಾಹನ ಸವಾರರು ಹೆಲ್ಮೆಟ್ ಬಳಕೆ ಮಾಡುವ ಮೂಲಕ ತಮ್ಮ ಅಮೂಲ್ಯವಾದ ಜೀವವನ್ನು ರಕ್ಷಿಸಿಕೊಳ್ಳುವುದರ ಜೊತೆಗೆ ತಮ್ಮ ಕುಟುಂಬದ ಭದ್ರತೆ ಕಾಪಾಡಿಕೊಳ್ಳಬೇಕು ಎಂದು ಜಾಗೃತಿ ಮೂಡಿಸಿದರು.**

# ಉಚ್ಚ ಗ್ರಾಮದಲ್ಲಿ ಡಾ. ಚನ್ನಬಸವ ಪಟ್ಟದೇವರ 134ನೇ ಜಯಂತಿ ಸಂಪನ್ನ



ಭಾಲ್ಕಿ : ಭಾಲ್ಕಿ ತಾಲೂಕಿನ ಉಚ್ಚ ಗ್ರಾಮದ ಪೂಜ್ಯ ಶ್ರೀ ದಿವ್ಯಯೋಗಿ ಶ್ರೀ ಕಂಠಯ್ಯಾ ಸ್ವಾಮಿಗಳ ಲಿಂಗಯೋಗ ಧ್ಯಾನ ಮಂದಿರದಲ್ಲಿ, ಪೂಜ್ಯಶ್ರೀ ಡಾಕ್ಟರ್ ಚನ್ನಬಸವ ಪಟ್ಟದೇವರ 134ನೇ ಜಯಂತಿ ಉತ್ಸವ ಹಾಗೂ ಸೀಮಂತ ಜಾನಪದ ಕಾರ್ಯಕ್ರಮ ಶ್ರೀ ಶರಣ ಬಸವೇಶ್ವರ ದೇವಸ್ಥಾನ ಉಚ್ಚ ಗ್ರಾಮದಲ್ಲಿ ಜರುಗಿತು. ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಪೂಜ್ಯ ಮಾತೆ ನೀಲಾಂಬಿಕಾ ತಾಯಿ ಗುರುಚನ್ನಬಸವ ಆಶ್ರಮ ಕಪಲಾಪುರ ಕ್ರಾಸ್, ಪೂಜ್ಯ ಮಾತೆ ದೇವಮ್ಮ ತಾಯಿ ಡೋಣಗಾಪುರ, ಪೂಜ್ಯ ಶ್ರೀ ವೈಜನಾಥ ಮಹಾರಾಜರು ಗಡವಂತಿ ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಬಸವರಾಜ ವಾರದ ಉಚ್ಚ ಅವರು ನೆರವೇರಿಸಿದರು. ಶ್ರೀಮತಿ ರೇಖಾ ಮಹಾಜನ್ ನಿವೃತ್ತ ಪ್ರಾಚಾರ್ಯರು ಭಾಲ್ಕಿ ಅವರು ಅನುಭಾವ ನುಡಿದರು. ಸೀಮಂತ ಜಾನಪದ ಕಾರ್ಯಕ್ರಮದಲ್ಲಿ ಅನೇಕ ಸಂಗೀತ ನೃತ್ಯ ಕಾರ್ಯಕ್ರಮ ನಡೆಯಿತು. ಇದೇ ಸಂದರ್ಭದಲ್ಲಿ ಮಾತನಾಡಿದ ಶ್ರೀಮತಿ ರೇಖಾ ಮಹಾಜನ್ ಅವರು ಜಾನಪದ ಕಲೆಯ ಕುರಿತು ಅದರಲ್ಲಿನ ಅಡಕುಗಳ ಕುರಿತು ವಿವರಿಸುತ್ತಾ

**ಆಡಿ ಬಾ ಎನ್ನ ಕಂದ ಅಂಗಾಲ**
**ತೊಳೆದೇನ ತೆಂಗಿನ ಕಾಯಿ**
**ತಿಳಿನೀರ। ತಕ್ಕೊಂಡು**
**ಬಂಗಾರದ ಮೊರೆ ತೊಳೆದೇನ,**
**ಕೂಸು ಇದ್ದ ಮನೆಗೆ ಬೀಸಣಿಗೆ**
**ಯಾತಕೆ**
**ಕೂಸು ಕಂದಯ್ಯ ಒಳ**
**ಹೊರಗ। ಆಡಿದರೆ**
**ಬೀಸಣಿಗೆ ಗಾಳಿ ಸುಳಿದಾವ,**
**ಬ್ಯಾಸಿಗೆ ದಿವಸಕ್ಕ ಬೇವಿನ ಗಿಡ**
**ತಂಪ**
**ಭೀಮಾರತಿಯೆಂಬ ಹೊಳಿ**
**ತಂಪ**
**ಹಡೆದವ್ವ ನೀ ತಂಪ ನನ್ನ**
**ತವರಿಗೆ ?**

ಮಗುವಿನ ಬಗ್ಗೆ ತಾಯಿ ತಾಯ್ತನ ಹೆಣ್ಣಿನ ಜನ್ಮದ ಕುರಿತು ಜನಪದದಲ್ಲಿ ಮೂಡಿರುವ ಅತ್ಯಮೂಲ್ಯ ಭಾವನೆಗಳ ಬಗ್ಗೆ ಪುಟಗಟ್ಟಲೆ ಬರೆಯಬಹುದು. ತಾಯಿ ತನ್ನ ಮಗುವನ್ನು ವರ್ಣಿಸುವಾಗ, ಆತನ ಲೀಲೆಗಳ ಬಗ್ಗೆ ಹೇಳುವಾಗ ಉಪಯೋಗಿಸಿರುವ ಸುಂದರ ಪ್ರತಿಮೆಗಳು ಸರಳ ಮತ್ತು ಚಂದವಾಗಿ ವರ್ಣಿಸುತ್ತ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ರಾಣಿ ವಿಲಾಸ್ ಬಕ್ಕಾ ಅವರು ಆಗಮಿಸಿದ್ದರು. ಗೌರವ ಉಪಸ್ಥಿತಿಯನ್ನು ಗ್ರಾಮದ ಹಿರಿಯರಾದ ಶ್ರೀ ಮಲ್ಲಿಕಾರ್ಜುನ್ ಅಳ್ಳೆ ಅವರು ವಹಿಸಿದ್ದರು. ಶ್ರೀಮತಿ ಸುಧಾರಾಣಿ ಸಿದ್ದಲಿಂಗ ಮಠಪತಿ ಬಸವ ಗುರುಪೂಜೆಯನ್ನು ನೆರವೇರಿಸಿದರು. ಶ್ರೀಮತಿ ಶ್ರೀದೇವಿ ಶಾಂತಯ್ಯ ಮಠಪತಿ ವಚನ ಗಾಯನ ಮಾಡಿದರು. ಕವನ ಶಾಂತಯ್ಯ ಮಠಪತಿ ವಚನ ನೃತ್ಯ ಮಾಡಿದರು. ಶಿವಯೋಗಿ ಸ್ವಾಮಿ ಸ್ವಾಗತಿಸಿದರು. ಮಹಿಳಾ ಕದಳಿ ವೇದಿಕೆ ಭಾಲ್ಕಿಯ ಅಧ್ಯಕ್ಷರಾದ ಮಲ್ಲಮ್ಮ ನಾಗನಕೇರೆ ಅವರು ನಿರೂಪಿಸಿದರು. ಮಹಾದೇವಿ ಚಿದ್ರೆ, ಕಸ್ತೂರ್ಬಾಯಿ ಚಿದ್ರೆ, ನಾಗಮ್ಮ ಚಿದ್ರೆ, ಅನಿತಾ ಗುರುಬಸಪ್ಪ ಜಾಣೆ, ಮಾದೇವಿ ಸ್ವಾಮಿ, ಜಗದೇವಿ ಸ್ವಾಮಿ,ರಾಮಚಂದ್ರ ಯರನಾಳೆ ಜಾನಪದ ಗೀತೆ ಹಾಡಿದರು. ಖಂಡ್ರೆ ತಾಯಿ, ಶ್ರೀ ಡಾ. ವೀರಶಟ್ಟಿ ಕೋರೆ ಬೀದರ್ ಅನೇಕರು ಹಾಗೂ ಗ್ರಾಮದ ಶರಣ ಶರಣೆ ಮಾತೆಯರು ಉಪಸ್ಥಿತರಿದ್ದರು.

ವೇದಿಕೆಯ ಮೇಲೆ ಉಪಸ್ಥಿತರಿದ್ದ ಎಲ್ಲರಿಗೂ ಗೌರವಿಸಿ ಸನ್ಮಾನಿಸಲಾಯಿತು. ಎಂದು

ಶ್ರೀ ಶಾಂತಯ್ಯ ಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದಾನಿಗೊಂಡ ಮಡಿಕಲ್ ಕಾಲೇಜಿನಲ್ಲಿ ಸ್ಪೂರ್ತಿ ಕಾರ್ಯಕ್ರಮ

# ದೇಶದ ಆಯುರ್ವೇದ ಪದ್ಧತಿ ವಿಶ್ವಮಟ್ಟಕ್ಕೆ ಬೇಡಿಕೆ: ಡಾ. ಪಟ್ಟಣಶೆಟ್ಟಿ



ತೇರದಾಳ : ದೇಶದ ಆಯುರ್ವೇದ ಪದ್ಧತಿ ಇಂದು ವಿಶ್ವಮಟ್ಟದಲ್ಲಿ ತನ್ನದೇಯಾದ ಹೆಸರು ಮಾಡುತ್ತಿರುವುದು ಭಾರತ ದೇಶದ ಹೆಗ್ಗಳಿಕೆ ಆಗಿದೆ. ಆ ದಿಸೆಯಲ್ಲಿ ಕೇಂದ್ರ ಸರಕಾರ ಕೂಡ ಆಯುರ್ವೇದಕ್ಕೆ ಸಾಕಷ್ಟು ಪ್ರಾಮುಖ್ಯತೆ ನೀಡುತ್ತಿದೆ ಎಂದು ಬೆಂಗಳೂರಿನ ರಾಜೀವ ಗಾಂಧಿ ಆರೋಗ್ಯ ವಿಶ್ವ ವಿದ್ಯಾಲಯದ ಸೆನೆಟ್ ಸದಸ್ಯ ಡಾ. ಸಚಿನ ಪಟ್ಟಣಶೆಟ್ಟಿ ಹೇಳಿದರು.

ಇಲ್ಲಿನ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ದಾನಿಗೊಂಡ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಸ್ಪೂರ್ತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಸಾಧನೆಗೆ ಸತತ ಪ್ರಯತ್ನದ ಅಗತ್ಯತೆ ಬೇಕು. ಭಾವಿ ವೈದ್ಯರು ತಮ್ಮ ವೃತ್ತಿಯನ್ನು ಹೊಸತನಕ್ಕೆ ಸಾಕ್ಷಿಯಾಗಿ ಮಾಡಿಕೊಂಡಾಗ ಮಾತ್ರ ವೈದ್ಯಕೀಯ ಕ್ಷೇತ್ರ ಬೆಳೆಯಲು ಸಾಧ್ಯ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಪ್ರಾಚಾರ್ಯ ಡಾ. ಮಹಾವೀರ ದಾನಿಗೊಂಡ, ಆಯುರ್ವೇದಕ್ಕೆ ಆಧುನಿಕ ಸ್ಪರ್ಶತೆ ಅಗತ್ಯವಾಗಿದೆ. ಆ ನಿಟ್ಟಿನಲ್ಲಿ ಸರಕಾರಗಳು ಕ್ರಮ ತಗೆದುಕೊಳ್ಳುವುದು ಸೂಕ್ತ. ಜರ್ಮನ್ ದೇಶ ಸೇರಿದಂತೆ ಇತರೆ ಹಲವು ರಾಷ್ಟ್ರಗಳು ಆಯುರ್ವೇದಕ್ಕೆ ಆಧುನಿಕ ಸ್ಪರ್ಶ ನೀಡಿದ್ದರಿಂದ ಮತ್ತಷ್ಟು ಜನಪ್ರಿಯತೆಗೊಂಡಿದೆ ಎಂದು ತಿಳಿಸಿದರು. ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಡಾ. ಪುಷ್ಪದಂತ ದಾನಿಗೊಂಡ, ಪ್ರಾಚಾರ್ಯ ಡಾ. ಪಿ.ಬಿ. ಅಪರಾಜ, ಡಾ. ಡಿ.ಬಿ. ಉಗಾರೆ, ಡಾ. ಮಹಾದೇವ ಬಡಿಗೇರ, ಡಾ. ಸಚಿನ್, ಜಿನ್ನಪ್ಪ ಸವದತ್ತಿ, ಕಾಲೇಜು ಪ್ರತಿನಿಧಿ ಪ್ರತೀಕ ಜಮಕಂಡಿ, ಮಮತಾ ಮತ್ತಿತರಿದ್ದರು.

# 'ವ್ಯೂಹ' ಚಿತ್ರದ 'ಮುದ್ದಾದ ಮಾಯೆ' ಹಾಡು ಬಿಡುಗಡೆ





ಬೆಳಗಾವಿ : ಎಸ್ ಡಿ ಫಿಲ್ಮ್ಸ್ ಮತ್ತು ಮೂರು ಬಿಟ್ಟವರು ಎಂಟರ್ಟೈನ್ಮೆಂಟ್ ಬ್ಯಾನರನ ಅಡಿಯಲ್ಲಿ ನಿರ್ಮಾಣವಾಗಿರುವ ಅಪ್ಪಟ ಉತ್ತರ ಕರ್ನಾಟಕದ ಪ್ರತಿಭೆಗಳೇ ಸೇರಿ ಮಾಡಿರುವಂತಹ " ವ್ಯೂಹ " ಕನ್ನಡ ಚಲನಚಿತ್ರದ "ಮುದ್ದಾದ ಮಾಯೇ ನಿನ್ನ ನಗು" ವಾಸುಕಿ ವೈಭವ ಅವರ ಕಂಠದಲಿ ಎರಡನೇ ಲಿರಿಕಲ್ ಹಾಡು ಮಾಸ್ ಮ್ಯೂಸಿಕ್ ಅಡ್ಡಾ ಯ್ಯೂಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆ ಮಾಡಲಾಯಿತು.

ಬೆಳಗಾವಿ ಸುತ್ತಮುತ್ತಲು ಚಿತ್ರೀಕರಣ ನಡೆಸಲಾಗಿದ್ದು ಪ್ರಮುಖ ಪಾತ್ರದಲ್ಲಿ ಸೂರಜ್ ದೇಸಾಯಿ, ಪ್ರವೀಣ ಸುತಾರ, ದೀಪಶ್ರೀ ಗೌಡ, ಮಾನಸಿ ಶಿವನಗೇಕರ್, ಮಹೇಶ ಪಾಟೀಲ್, ಅಭಿಜಿತ ದೇಶಪಾಂಡೆ , ಶಾಂತಾ ಆಚಾರ್ಯ, ಕಿರಣ್, ಮಂಜುನಾಥ ಮಠದ ಮುಂತಾದವರು ಅಭಿನಯಿಸಿರುವ ಕೋವಿಡ್ ಸಮಯದಲ್ಲಿ ನಡೆಯುವಂತಹ ಒಂದು ಸಸ್ಪೆನ್ಸ್ ಥ್ರಿಲ್ಲರ್ ಡ್ರಾಮಾ ಕಥೆ ಇದಾಗಿದೆ, ಯಾರು ಒಳ್ಳೆಯವರು ಅಲ್ಲಾ ಹಾಗೇ ಕೆಟ್ಟವರು ಅಲ್ಲಾ, ಮನುಷ್ಯನ ಪರಿಸ್ಥಿತಿ ಆತನನ್ನು ಕೆಟ್ಟವನು, ಒಳ್ಳೆಯವನಾಗಿ ಮಾಡುತ್ತೆ ಎನ್ನುವುದೇ ಚಿತ್ರದೊಳಗೆ ಅಡಗಿರುವ ಕಥೆ.

ವಿಶ್ವಾರಾಧ್ಯ ಕೋಟಿ ಛಾಯಾಗ್ರಹಣ , ಚಿತ್ರದ ಒನಲೈನ್ ಕಥೆಯನ್ನು ಸೂರಜ್ ದೇಸಾಯಿ ಬರೆದಿದ್ದಾರೆ. ಚಿತ್ರಕಥೆ, ಸಂಭಾಷಣೆಯನ್ನು, ಪ್ರವೀಣ ಸುತಾರ, ಮಹೇಶ ಪಾಟೀಲ, ಅಭಿಷೇಕ್ ದೇಸಾಯಿ ಬರೆದಿದ್ದಾರೆ. ಈಗಾಗಲೇ ಅನಾಮಿಕ, ಒಂದೊಳ್ಳೆ ಲವ್ ಸ್ಟೋರಿ ಚಿತ್ರಗಳನ್ನು ನಿರ್ದೇಶಿಸಿ ಗುರುತಿಸಿಕೊಂಡ ಪ್ರವೀಣ ಸುತಾರ ಚಿತ್ರವನ್ನು ಅಚ್ಚುಕಟ್ಟಾಗಿ ನಿರ್ದೇಶನ ಮಾಡಿದ್ದಾರೆ. ಫ್ರಾಂಕ್ಲೀನ್ ರಾಕಿ ಸಂಗಿತ ನಿರ್ದೇಶನ, ಪ್ರಶಾಂತ ಶೇಬನ್ನವರ ಸಂಕಲನ , ಡಾ.ಪ್ರಭು ಗಂಜಿಹಾಳ ,ಡಾ.ವೀರೇಶ ಹಂಡಿಗಿ ಅವರ ಪತ್ರಿಕಾ ಸಂಪರ್ಕ ಚಿತ್ರಕ್ಕೆ ಇದೆ. ಸಂಪೂರ್ಣ ಚಿತ್ರ ಸಿದ್ದವಾಗಿದ್ದು ಚಲನಚಿತ್ರವನ್ನು ಬಿಡುಗಡೆಗೊಳಿಸುವ ಕಾರ್ಯಗಳನ್ನು ರೂಪಿಸಲಾಗುತ್ತಿದೆ ಎಂದು ನಿರ್ದೇಶಕ ಪ್ರವೀಣ ಸುತಾರ ತಿಳಿಸಿದ್ದಾರೆ.

**ವರದಿ :**
**ಡಾ.ಪ್ರಭು ಗಂಜಿಹಾಳ**
**ಮೊ: 9448775346**

# ರಾಜ್ಯದಾದ್ಯಂತ ಹಲವಡೆ ವಿಕಸಿತ ಭಾರತ ಸಂಕಲ್ಪ ಯಾತ್ರೆ

ವಿಕಸಿತ ಭಾರತ ಸಂಕಲ್ಪ ಯಾತ್ರೆ ಮೂಲಕ ಕೇಂದ್ರ ಸರ್ಕಾರದ ಹಲವು ಯೋಜನೆಗಳನ್ನು ಗ್ರಾಮೀಣ ಹಾಗೂ ನಗರ ಪ್ರದೇಶದ ಕಟ್ಟ ಕಡೆಯ ಜನರಿಗೆ ತಲುಪಿಸಲಾಗುತ್ತಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಹಾಗೂ ರಾಜ್ಯದ ಇತರ ಜಿಲ್ಲೆಗಳಲ್ಲಿ ನಾಳೆ ಕಾರ್ಯಕ್ರಮವನ್ನು ಅಯೋಜಿಸಲಾಗುತ್ತದೆ.

**ಬೆಂಗಳೂರು ನಗರ:** ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜನತಾ ಕೋ-ಆಪರೇಟಿವ್ ಸೊಸೈಟಿ, ಮಲ್ಲೇಶ್ವರಂ ಹಾಗೂ ಸಂಗೊಳ್ಳಿ ರಾಯಣ್ಣ ಪಾರ್ಕ್, ಬಸವೇಶ್ವರನಗರದಲ್ಲಿ ವಿಕಸಿತ ಭಾರತ ಸಂಕಲ್ಪ ಯಾತ್ರೆ ನಡೆಯಲಿದೆ.

**ಮೈಸೂರು :** ಸರಗೂರು ಬಸ್ ನಿಲ್ದಾಣ ಹಾಗೂ ಹೆಗ್ಗಡದೇವನಕೋಟೆ ಬಸ್ ನಿಲ್ದಾಣ.

**ಕೊಡಗು :** ಸೋಮವಾರಪೇಟೆ ಮಾರುಕಟ್ಟೆ, ಮಡಿಕೇರಿ ಹಳೆಯ ಖಾಸಗಿ ಬಸ್ ನಿಲ್ದಾಣ.

**ವಿಜಯನಗರ ಜಿಲ್ಲೆ:** ಹಗರಿಬೊಮ್ಮನಹಳ್ಳಿ ಎಪಿಎಂಸಿ , ಹಗರಿಬೊಮ್ಮನಹಳ್ಳಿ ರಾಮನಗರ ಮಸೀದಿ. ಬೆಳಗಾವಿ : ಅಥಣಿ ಬಸ್ ನಿಲ್ದಾಣ, ಕೆ.ಎಲ್.ಇ. ಆರ್ಟ್ಸ್ ಸೈನ್ಸ್ ಕಾಲೇಜ್ .

**ಧಾರವಾಡ** : ಕಲಘಟಗಿ ಬಸ್ ನಿಲ್ದಾಣ , ಕುಂದಗೋಳ ಬಸ್ ನಿಲ್ದಾಣ. **ರಾಯಚೂರು** : ಮಾನ್ವಿ ಬಸ್ ನಿಲ್ದಾಣ, ಮಾನ್ವಿ ಎಪಿಎಂಸಿ ವೃತ್ತ

**ಕಲಬುರಗಿ:** ಕಮಲಾಪುರ ಬಸ್ ನಿಲ್ದಾಣ.

**ಬೀದರ್** : ಚಿಟ್ಗೊಪ್ಪ ಕರೀಂ ಉಲ್ ಶಾ ದರ್ಗಾ, ಹಳೆಯ ಬಸ್ ನಿಲ್ದಾಣದ ಹತ್ತಿರ.

ವಿಕಸಿತ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಭಾಗವಹಿಸಿ, ಕೇಂದ್ರ ಸರ್ಕಾರದ ಹಲವು ಯೋಜನೆಗಳ ಮಾಹಿತಿ ಹಾಗೂ ಪ್ರಯೋಜನ ಪಡೆಯಬಹುದು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS,** Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State